₹ 5/-

# ನೇಸರು

## ಮೈಸೂರು ಅಸೋಸಿಯೇಷನ್ ಮುಂಬೈ

Nesaru Tingalole Vol XXXV - 6 June 2017



ಶ್ರೀ ರಾಮಾನುಜಾಚಾರ್ಯ ಅವರ ಜಯಂತಿಗೆ ಸಹಸ್ರಮಾನೋತ್ಸವದ ಸಂಭ್ರಮ
ಅವರಿಗೆ ನಮ್ಮ ಭಕ್ತಿ ಪೂರ್ವಕ ನಮನಗಳು

**The Mysore Association, Bombay**
393, Bhau Daji Road, Matunga, Mumbai - 400 019.
Tel.: 2402 4647, 2403 7065 • Fax : 2401 0574
Email : mysoreassociation.mumbai@gmail.com

# ಮೈಸೂರು ಅಸೋಸಿಯೇಷನ್, ಮುಂಬೈ

# The Mysore Association, Mumbai

393, Bhaudaji Road, Matunga, Mumbai – 400 019, Ph : 2402 4647 / 2403 7065, **e-mail :**mysoreassociation.mumbai@gmail.com


## ನೇಸರು ಎರಡನೆಯ ಜಾಗತಿಕ ಕನ್ನಡ ಕವನ ಸ್ಪರ್ಧೆ – 2017 – ವಿಜೇತರು

### ಪ್ರಥಮ ಬಹುಮಾನ



ಹೆಸರು : ತಾ. ಶ್ರೀ. ಗುರುರಾಜ್
ಬೆಂಗಳೂರು

ಕವನ : "ಮುನಿಬ್ಯಾಡ ಮಳೆಯೇ"



ಹೆಸರು: ರೇಣುಕಾರಮಾನಂದ್
ಅಂಕೋಲ

ಕವನ: "ಎಲ್ಲಿದ್ದೆವು ಇಷ್ಟು ದಿನ"

### ದ್ವಿತೀಯ ಬಹುಮಾನ



ಹೆಸರು: ವಿನಾಯಕ ಅರಳಸುರಳಿ
ಶಿವಮೊಗ್ಗ

ಕವನ: "ಜಾತ್ರೆ ಮುಗಿದ ಬಯಲು"



ಹೆಸರು: ಶುಭಾ ಎ. ಆರ್. ಬೆಂಗಳೂರು

ಕವನ :
"ಅಮ್ಮನ ನೆನಪಿನ ಮ್ಯೂಜಿಯಮ್"

### ತೃತೀಯ ಬಹುಮಾನ



ಹೆಸರು : ಮುಸ್ತಾಫ ಕೆ. ಎಚ್
ಕೊಡಗು

ಕವನ :
"ನಾನು ಉಮ್ಮ ಮತ್ತುಹರಾಮ್"



ಹೆಸರು : ಜಿ. ಕೆ. ಕುಲಕರ್ಣಿ
ತುಮಕೂರು

ಕವನ : "ಸಣ್ಣಸೂಜಿ"

### ಪ್ರೋತ್ಸಾಹಕ ಬಹುಮಾನ



ಹೆಸರು: ಸತ್ಯೇಶ್ ಎನ್. ಬೆಳ್ಳೂರ್
ಬೆಂಗಳೂರು

ಕವನ :
"ಅಥಾತೋ ಭಕ್ತಿ ಜಿಜ್ಞಾಸಾ..."



ಹೆಸರು : ಶಾಂತಿ ಶೆಟ್ಟಿ, ಡೊಂಬಿವಲಿ

ಕವನ :
"ಏನೆಂದು ಬರೆಯಲಿ ಹೇಳು"

ಈ ಕವನ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಮತ್ತು ಭಾಗವಹಿಸಿದ ಎಲ್ಲರಿಗೂ ಹಾಗೂ ತೀರ್ಪುಗಾರರಾಗಿಸಹಕರಿಸಿದವರಿಗೆ ಮೈಸೂರು ಅಸೋಸಿಯೇಷನ್ ತನ್ನ ಮನದಾಳ ಕೃತಜ್ಞತೆಯನ್ನುಈ ಮೂಲಕ ಹೇಳಬಯಸುತ್ತದೆ. ಬರುವ ಜೂನ್ 24ರಂದು ಶನಿವಾರ ಸಂಜೆ 6.30ಕ್ಕೆ ಮೈಸೂರು ಅಸೋಸಿಯೇಷನ್‌ನಲ್ಲಿ ಬಹುಮಾನ ವಿತರಣಾ ಸಮಾರಂಭ ಹಾಗೂ ಮೈಸೂರು ಅಸೋಸಿಯೇಷನ್‌ನ ಮುಖವಾಣಿ 'ನೇಸರು' ವಿಶೇಷ ಸಂಚಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ವಿಜೇತರಾದವರಿಗೆ ಬಹುಮಾನವನ್ನು ವಿತರಿಸಲಾಗುವುದು. ಈ ಕಾರ್ಯಕ್ರಮದಲ್ಲಿಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಇದರ ಅಧ್ಯಕ್ಷರಾದ ಶ್ರೀ ಮನು ಬಳಿಗಾರ್, ವಿಶೇಷ ಅತಿಥಿಗಳಾಗಿ ಖ್ಯಾತ ಲೇಖಕರು ಡಾ. ಜಯಂತ್ ಕಾಯ್ಕಿಣಿ ಹಾಗೂ ಖ್ಯಾತ ಲೇಖಕಿ ಡಾ. ಸುನೀತಾ ಶೆಟ್ಟಿಯವರು ಭಾಗವಹಿಸಲಿದ್ದಾರೆ. ಈ ಕಾರ್ಯಕ್ರಮದ ನಂತರ ಖ್ಯಾತ ವಿದುಷಿ ಶ್ಯಾಮಲಾ ಪ್ರಕಾಶ್ ಅವರಿಂದ ಬಹುಮಾನಿತ ಕವಿತೆಗಳ ಗಾಯನ– ರಸಮಂಜರಿ ಕಾರ್ಯಕ್ರಮ ನಡೆಯಲಿದೆ.

ಗೌ. ಸಂಪಾದಕರು :

**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ ಮೇಡರ್**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎಸ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.

*- Ed.*

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ,
ಮುಂಬಯಿ-400 019.
✆ 24024647 / 2403 7065
Fax : 2401 0574
Email :
mysoreassociation.mumbai@gmail.com
Website :
www.mysoreassociation.in

*ಸಂಪಾದಕೀಯ*

# ನೇಸರು
## ತಿಂಗಳೋಲೆ

**ಸಂಪುಟ 35** **ಜೂನ್ 2017** **ಸಂಚಿಕೆ 6**

ವ್ಯಕ್ತಿಯೊಬ್ಬನ ಬದುಕಿನಲ್ಲಿ, ಅವನ ಪ್ರತಿ ಹೆಜ್ಜೆ ಹೆಜ್ಜೆಗೂ ಜೊತೆಯಲ್ಲಿಯೇ ನಿಂತು ಬೆಂಬಲಿಸುವ ನಿಜವಾದ ಗೆಳೆಯನೆಂದರೆ ತಾಳ್ಮೆ. ಜೀವನದಲ್ಲಿ ತಾಳ್ಮೆ ಬಹಳ ಮುಖ್ಯವಾದುದು. ಬದುಕಿನಲ್ಲಿ ತಾಳ್ಮೆಯಿಲ್ಲದಿದ್ದರೆ ಜೀವನದಲ್ಲಿ ಯಶಸ್ಸನ್ನು ಪಡೆಯಲು ಸಾಧ್ಯವಿಲ್ಲ. ಕೆಲವರ ಬದುಕಿನಲ್ಲಿ ತಾಳ್ಮೆ ಎನ್ನುವ ಪದಕ್ಕೆ ಅರ್ಥವೇ ಇಲ್ಲ. ಆ ಪದದ ಅರ್ಥ ತಿಳಿದುಕೊಳ್ಳಲಿಕ್ಕೆ ಅವರಲ್ಲಿ ತಾಳ್ಮೆಯೇ ಇಲ್ಲವೇನೋ. ಇವತ್ತು ದಿನಪತ್ರಿಕೆಯನ್ನು ಕೈಗೆತ್ತಿಕೊಂಡರೆ ಸಾಕು, ಪತ್ರಿಕೆಯ ಯಾವ ಮೂಲೆಯಲ್ಲಿ ನೋಡಿದರೂ ಕೊಲೆಗಳದ್ದೇ ಸರಮಾಲೆ ಕಾಣಲು ಸಿಗುತ್ತದೆ. ಕೋಪದಿಂದ ತಂದೆಯನ್ನೇ ಕೊಂದ ಮಗ ಅಥವಾ ತಾಯಿಯನ್ನೇ ಕೊಂದ ಮಗ, ಪತ್ನಿಯನ್ನೇ ಹೊಡೆದು ಕೊಂದ ಗಂಡ, ಪ್ರಿಯತಮನಿಗಾಗಿ ಗಂಡನನ್ನೇ ಕೊಂದ ಪತ್ನಿ ಇತ್ಯಾದಿ. ಇದಕ್ಕೆಲ್ಲ ಕಾರಣ ತಾಳ್ಮೆಯ ಜಾಗದಲ್ಲಿ ಬಂದು ಕುಳಿತಿರುವ ಕೋಪ. ಕೋಪದಲ್ಲಿ ವ್ಯಕ್ತಿ ತನ್ನ ಪ್ರಜ್ಞಾಸ್ಥಿತಿಯನ್ನು ಕಳೆದುಕೊಂಡಿರುತ್ತಾನೆ. ತಾನು ಮಾಡುತ್ತಿರುವುದು ಸರಿಯೋ ತಪ್ಪೋ ಅನ್ನೋದನ್ನು ಯೋಚಿಸುವ ವ್ಯವದಾನ ಆತನಲ್ಲಿರುವುದಿಲ್ಲ. ನಮ್ಮ ಸುತ್ತಮುತ್ತ ನಡೆಯುತ್ತಿರುವ ಹಲವಾರು ಅಪರಾಧದ ಮೇಲೆ ಕಣ್ಣಾಯಿಸಿದಾಗ ನಮಗೆ ತಿಳಿದು ಬರುವುದೇನೆಂದರೆ, ಹೆಚ್ಚಿನ ಅಪರಾಧಗಳಲ್ಲಿ ನಮ್ಮ ಯುವಜನತೆ ಭಾಗಿಗಳಾಗಿರುವುದು ಕಂಡು ಬರುತ್ತದೆ. ಇನ್ನೇನು ಕಾಲೇಜು ಶಿಕ್ಷಣ ಮುಗಿಸಿ, ತಮ್ಮ ಸುಂದರ ಭವಿಷ್ಯವನ್ನು ನಿರ್ಮಿಸಿಕೊಳ್ಳಬೇಕಿರುವ ನಮ್ಮ ಯುವ ಜನಾಂಗ ಕೋಪದಲ್ಲಿ ಮಾಡಿದ ಕೃತ್ಯದಿಂದಾಗಿ ಕಾರಾಗೃಹವಾಸ ಮಾಡುತ್ತಿರುವುದು ಬಹಳ ವಿಷಾದದ ಸಂಗತಿ ಹಾಗೇ ಇದು ಅಷ್ಟೇ ಆತಂಕಕಾರಿ ವಿಷಯವೂ ಕೂಡ. ಒಟ್ಟಿನಲ್ಲಿ ನಮ್ಮ ಯುವಜನತೆಯಲ್ಲಿ ಸಂವೇದನಾಶೀಲತೆಯ ಕೊರತೆ ಎದ್ದು ಕಾಣುತ್ತದೆ. ಪರಿವಾರವೆಂದರೆ ಏನು ಅನ್ನುವುದನ್ನು ಹೊಟ್ಟೆಪಾಡಿಗಾಗಿ ತವರೂರನ್ನು ಬಿಟ್ಟು ದೂರದ ನಗರ ಪ್ರದೇಶಗಳಲ್ಲಿ ಒಬ್ಬಂಟಿಯಾಗಿ ವಾಸಿಸುವುವವರನ್ನು ಕೇಳಿ, ಗೊತ್ತಾಗುತ್ತದೆ.

ಕೋಪದಲ್ಲಿ ಕೊಯ್ದುಕೊಂಡ ಮೂಗು ಶಾಂತವಾದ ಮೇಲೆ ಮರಳಿ ಬರುವುದಿಲ್ಲ. ಆದರೆ ಖುಷಿಯಲ್ಲಿದ್ದಾಗಲೂ ಮೂಗನ್ನು ಕೊಯ್ದುಕೊಂಡರೂ ಮರಳಿ ಬಾರದು. ಇವತ್ತು ನಾವು ದುಡುಕಿನಿಂದ ತೆಗೆದುಕೊಳ್ಳುವ ತೀರ್ಮಾನಗಳು ಮುಂದೆ ಎಂಥಹ ಕೆಟ್ಟ ಪರಿಣಾಮವನ್ನು ಉಂಟುಮಾಡುತ್ತದೆ ಅನ್ನೋದರ ಪರಿಜ್ಞಾನವಿರುವುದಿಲ್ಲ ಆಗ. ಆ ಸಮಯದಲ್ಲಿ ಮನಸ್ಸಿನ ಯೋಚನಾ ಶಕ್ತಿ ನಮ್ಮ ಹಿಡಿತದಲ್ಲಿರುವುದಿಲ್ಲ. ಅದಕ್ಕಾಗಿ ಯೋಗ, ಪ್ರಾಣಯಾಮಕ್ಕೆ ಮೊರೆಹೋಗುವುದು ಉಚಿತವೆಂದನಿಸುತ್ತದೆ. ಈ ಯೋಗ ನಮ್ಮ ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳಲುಅ ಬಹುಪಕಾರಿ.

ಇವತ್ತು ಪರಿಶ್ರಮಕ್ಕೆ ಬೆಲೆ ಇಲ್ಲ ಅಂದರೆ ಅದಕ್ಕೆ ಯಾರೂ ಗಮನ ನೀಡುತ್ತಿಲ್ಲ. ಎಲ್ಲರಿಗೂ ರಾತ್ರಿ ಬೆಳಗಾಗುವುದರೊಳಗೆ ಯಶಸ್ಸನ್ನು ಗಳಿಸಿ ಉನ್ನತ ಮಟ್ಟಕ್ಕೇರಬೇಕೆಂಬ ಉತ್ಸುಕತೆ. ತಮ್ಮ ಸ್ವಂತ ಪರಿಶ್ರಮದಿಂದ ಹಂತ ಹಂತವಾಗಿ ಮೇಲಕ್ಕೇರಬೇಕೆಂಬ ಮಹದಾಸೆ ಇವತ್ತು ಯಾರಿಗೂ ಬೇಡ. ಅಡ್ಡದಾರಿಯಲ್ಲಿ ಗುರಿಯನ್ನು ಮುಟ್ಟಬೇಕೆನ್ನುವವರೇ ಹೆಚ್ಚು ನಮ್ಮಲ್ಲಿ. ಇವತ್ತು ಕ್ರಿಕೇಟ್‌ನಲ್ಲಿ ಸಚಿನ್ ತೆಂಡೂಲ್ಕೂರ್ ಧ್ರುವತಾರೆಯಾಗಿ ಮಿಂಚಿತ್ತಿದ್ದಾರೆ ಅಂದರೆ ಅವರು ಅದೆಷ್ಟೋ ವರ್ಷಗಳಿಂದ ಪಟ್ಟಿರುವ ಪರಿಶ್ರಮವೇ ಕಾರಣ. ತಮ್ಮ ಗುರಿಯನ್ನು ಉಸಿರನ್ನಾಗಿಸಿಕೊಂಡು, ಹಂತ ಹಂತವಾಗಿ ಮೇಲಕ್ಕೆ ಬಂದವರು ಅದೆಷ್ಟೋ ಮಂದಿ ನಮ್ಮ ನಡುವೆ ಇದ್ದಾರೆ. ಅವರೆಲ್ಲರ ಜೀವನ ನಮಗೆ ಆದರ್ಶಪ್ರಾಯವಾಗಿದೆ. ಒಂದು ವೇಳೆ ನಮ್ಮ ನಡುವೆ ಇರುವ ಮಹಾನ್ ಸಾಧಕರು ಕ್ಷಣವೇಗದಲ್ಲಿ ಹೆಸರು ಗಳಿಸುವ ಅಭಿಲಾಷೆ ಇಟ್ಟುಕೊಂಡಿದ್ದರೆ, ಇವತ್ತು ನಮಗೆ ಅವರು ಆದರ್ಶಪ್ರಾಯರಾಗುತ್ತಿರಲಿಲ್ಲ. ಅವರುಗಳ ಸಾಧನೆಗೆ ಹಿಡಿದದ್ದು ಒಂದೆರಡು ವರ್ಷವಲ್ಲ. ಯಶಸ್ಸನ್ನು ಒಂದು ದಿನದಲ್ಲಿ ಸಾಧಿಸಲು ಸಾಧ್ಯವಿಲ್ಲ. ಅದು ಅವರ ಅನೇಕ ವರ್ಷಗಳ ಸಾಧನೆಯ ಪ್ರತಿಫಲ. ನಿರಂತರ ಪ್ರಯತ್ನ, ಶ್ರಮ, ತಾಳ್ಮೆಯೇ ಈ ಯಶಸ್ಸಿನ ಮೆಟ್ಟಿಲುಗಳಾಗಿವೆ. ಅದಕ್ಕಾಗಿಯೇ ಅಲ್ಲವೇ ನಮ್ಮ ಹಿರಿಯರು ಹೇಳಿದ್ದು 'ತಾಳಿದವನು ಬಾಳಿಯಾನು' ಎಂದು.

ಪ್ರತಿಯೊಬ್ಬ ಸಾಧಕನ ಹಿಂದೆ ಇರುವುದು ಅವನು ಮಾಡಿರುವ ತ್ಯಾಗ. ತನ್ನ ಗುರಿಯನ್ನು ಮುಟ್ಟಲು ಅದೆಷ್ಟೋ ಕ್ಷಣಗಳನ್ನು ಅವರು ತ್ಯಾಗ ಮಾಡಿದ್ದಾರೆ. ತಮ್ಮ ಪರಿವಾರದಿಂದ ದೂರವಿದ್ದು, ಒಂಟಿಯಾಗಿ ಎಲ್ಲಿಯೋ ಪರಸ್ಥಳದಲ್ಲಿ ತಮ್ಮ ಅಸ್ಮಿತೆಯನ್ನು ಹುಡುಕುತ್ತಾ, ಮನೆಯವರೊಂದಿಗೆ ಸುಖದಲ್ಲಿ ಕಳೆಯಬೇಕಾದ ಕ್ಷಣಗಳನ್ನು ಬದಿಗೊತ್ತಿ, ಮುಂದೆ ತಾನು ಸಾಧಿಸಬೇಕಾಗಿರುವ ಗುರಿಯನ್ನು ಕೇಂದ್ರಬಿಂದುವಾಗಿಸಿಕೊಂಡು ಬದುಕಿನಲ್ಲಿ ಯಶಸ್ಸನ್ನು ಪಡೆದವರು ಬಹಳ ಮಂದಿ ಇದ್ದಾರೆ. ಅದಕ್ಕೆ ಹೇಳುವುದು ಜೀವನದಲ್ಲಿ ಏನಾದರೂ ಸಾಧಿಸಬೇಕೆಂದಿದ್ದರೆ ತಾಳ್ಮೆ ಬೇಕೇ ಬೇಕು. ಬದುಕಿನಲ್ಲಿ ವ್ಯಕ್ತಿಗೆ ನಾಳಿನ ಚಿಂತೆ ಇರಬೇಕು. ಆದರೆ ನಾಳಿನ ಚಿಂತೆಗಾಗಿ ಇವತ್ತಿನ ಅಮೂಲ್ಯ ದಿನವನ್ನು ಹಾಳುಮಾಡಿಕೊಳ್ಳಬಾರದಷ್ಟೆ. ಎಲ್ಲವೂ ಒಂದು ಮಿತಿಯಲ್ಲಿರಬೇಕು ಅಲ್ಲವೇ?

**– ಡಾ. ಜ್ಯೋತಿ ಸತೀಶ್**

# ಡಾ. ಪ್ರದೀಪ ಕುಮಾರ್ ಹೆಬ್ರಿಯವರ 'ಮಗುವಿಗೊಂದು ಮುತ್ತು'

'ಮಗುವಿಗೊಂದು ಮುತ್ತು' ಚಿಕ್ಕ ಪುಟ್ಟ ಮಕ್ಕಳಿಗಾಗಿ ಡಾ. ಪ್ರದೀಪ ಕುಮಾರ್ ಹೆಬ್ರಿಯವರು ಬರೆದಿರುವ ಉಪಯುಕ್ತ ಕೃತಿಯಾಗಿದೆ. ಮಕ್ಕಳ ಜೊತೆಗೆ ಇದನ್ನು ದೊಡ್ಡವರೂ ಓದಬಹುದಾಗಿದೆ. ಏಕೆಂದರೆ ದೊಡ್ಡವರು ತಿಳಿಯದಿರುವ ಅನೇಕ ವಿಷಯಗಳು ಈ ಕೃತಿಯಲ್ಲಿದೆ. ಮಕ್ಕಳ ಪಾಲಿಗೆ ಈ ಜಗತ್ತು ಒಂದು ಕುತೂಹಲಕರವಾದ ಸ್ಥಳವಾಗಿರುತ್ತದೆ. ಇಲ್ಲಿಯ ಪ್ರತಿಯೊಂದು ವಿಷಯವನ್ನು ಅವರು ಬೆರಗುಗಣ್ಣಿನಿಂದ ನೋಡುತ್ತಾರೆ. ಅದನ್ನು ತಿಳಿಯುವ ಪ್ರಯತ್ನ ಮಾಡುತ್ತಾರೆ. ಅವರ ಕುತೂಹಲವನ್ನು ಅರಿತುಕೊಂಡು ದೊಡ್ಡವರು ಅವರಿಗೆ ಮಾರ್ಗದರ್ಶನ ಮಾಡಬೇಕಾಗುತ್ತದೆ. ಬಾಲ್ಯ ಕಾಲದಲ್ಲಿ ಮನದಟ್ಟಾದ ಮಾತುಗಳು, ವಿಷಯಗಳು ಮಗುವಿನ ಮನಸ್ಸಿನಲ್ಲಿ ಎಂದೂ ಮರೆಯಲಾರದಂತೆ ಆಳವಾಗಿ ಬೇರೂರುತ್ತವೆ.

ಈ ಪುಟ್ಟ ಸುಂದರ ಕೃತಿಯಲ್ಲಿ ವಿವಿಧ 42 ವಿಷಯಗಳ ಬಗ್ಗೆ ವಿವರಣೆಯಿದೆ. ಪುಟ್ಟ ಮಗುವಿನ ಬೊಚ್ಚು ಬಾಯನ್ನು ತಾದಾತ್ಮತೆಯಿಂದ ವೀಕ್ಷಿಸುವ ತಾಯಿಯ ಮುಖಪುಟ ಕೃತಿಗೆ ಇನ್ನಷ್ಟು ಮೆರುಗನ್ನು ತಂದಿತ್ತಿದೆ.

ಡಾ. ಪ್ರದೀಪ ಕುಮಾರರ ಕೃತಿಯಲ್ಲಿ ಹೇಳಿಕೊಂಡಿರುವಂತೆ ಈ ಕೃತಿಯಲ್ಲಿ ಬರುವ ಎಲ್ಲ ವಿಷಯಗಳು ನಾವು ಒಂದಲ್ಲ ಒಂದು ಪತ್ರಿಕೆಯಲ್ಲಿ ಓದಿರುವಂತದ್ದೇ. ಆದರೆ, ಅವರು ಅದನ್ನೆಲ್ಲ ಇಲ್ಲಿ ಒಂದೆಡೆ ಕಲೆಹಾಕಿ ಓದುಗರ ಮಡಿಲಿಗೆ ಹಾಕಿದ್ದಾರೆ. ಎಳೆಯ ಮಕ್ಕಳ ಜೊತೆಗೆ ಹಿರಿಯರೂ ಇದನ್ನು ಆಸಕ್ತಿಯಿಂದ ಓದಿದರೆ ಅವರ ಶ್ರಮ ಸಾರ್ಥಕವಾದಂತೆ.

ಈ ಕಿರುಹೊತ್ತಿಗೆಯಲ್ಲಿ ಬಹಳಷ್ಟು ಹೊಸ ವಿಷಯಗಳಿವೆ. ಸನ್‌ಫಿಶ್ ಎಂಬ ಮೀನು ಅದಕ್ಕೆ ಈಟಿಯಿಂದ ತಿವಿದರೂ, ಕೊಡಲಿಯಿಂದ ಕಡಿದರೂ ಅದಕ್ಕೇನೂ ಆಗುವುದಿಲ್ಲ. ಹಾವುಗಳು ಹಾಲು ಕುಡಿಯುವುದಿಲ್ಲ. ಶಾಂತ ಸಾಗರ ಮತ್ತು ಹಿಂದೂ ಮಹಾಸಾಗರಗಳಿಗೆ ಜಗಿದು ಮೀನು ಹಿಡಿಯುವ ಕೆಂಪು ಕೊಕ್ಕಿನ ಉಷ್ಣವಲಯದ ಒಂದು ಬಗೆಯ ಪಕ್ಷಿಗೆ ನೆಲದ ಮೇಲೆ ನಿಲ್ಲಲಾಗದು. ಮಳೆ ಹನಿ ಗುಂಡಗಿದೆ, ಮೊಟ್ಟೆ ಇಡುವ ಸಸ್ತನಿ ಹೀಗ ನಾವು ತಿಳಿಯದ ಹೊಸ ಹೊಸ ವಿಷಯಗಳಿವೆ.

ನಮ್ಮಲ್ಲಿ ಹಾವು ಹಾಲು ಕುಡಿಯುತ್ತವೆ ಎಂಬ ಕಲ್ಪನೆಯಿದೆ. ಆದರೆ, ಹಾವುಗಳು ದ್ರವ ಆಹಾರವನ್ನು ಸೇವಿಸುವುದಿಲ್ಲ. ತಂಪು ರಕ್ತದ ಜೀವಿಗಳಾದ ಹಾವುಗಳಿಗೆ ಬದುಕುವುದಕ್ಕೆ ನೀರಿನ ಅವಶ್ಯಕತೆ ಹೆಚ್ಚಾಗಿರುವುದಿಲ್ಲ. ಹಾವಾಡಿಗರು ಹಾವಿನ ಮೂಗನ್ನು ಹಾಲಿನ ಬಟ್ಟಲಲ್ಲಿ ಮುಳುಗಿಸುತ್ತಾರೆ. ಅಥವಾ ಅದರ ಬಾಯಿಗೆ ಸುರಿಯುತ್ತಾರೆ. ಇದರಿಂದ ಅದಕ್ಕೆ ಕಿರಿಕಿರಿಯೂ ಆಗಬಹುದು. ಕೆಲವೊಮ್ಮೆ ಅದರ ಸಾವು ಕೂಡ ಸಂಭವಿಸಬಹುದು.

ಇದೇ ರೀತಿ ಆಸಕ್ತಿ ಹುಟ್ಟಿಸುವ ಇನ್ನೊಂದು ಲೇಖನ 'ಕ್ವಾಸಾರ್'. ಇದು ವಿಶ್ವದ ಒಂದು ನಿಗೂಢ ಪ್ರಕೃತಿಯ ಆಕಾಶಕಾಯ. ಇಡೀ ವಿಶ್ವದಲ್ಲಿ ಇದರಷ್ಟು ತೀವ್ರ, ತೀಕ್ಷ್ಣ ಶಕ್ತಿ ಸಂಚಿತ ಕಾಯ ಬೇರೆ ಯಾವುದೂ ಇಲ್ಲ. ಇದರದು ಭಾರೀ ನಕ್ಷತ್ರದಂತಹ ಸ್ವರೂಪ.

'ಆಮ್ಲ ಮಳೆ' ಇದೇ ರೀತಿಯ ಮತ್ತೊಂದು ಲೇಖನ. ಭೂಮಿಗೆ ಬರುವ ವೇಳೆ, ಮಳೆ ವಿಷಮಯವಾಗಿ ಸುರಿಯುವುದೇ ಆಮ್ಲಮಳೆ. ಶುದ್ಧವಾದ ನೀರಿನಿಂದ ತುಂಬಿರುವ ಮೋಡಗಳು ಭೂಮಿಗೆ ಸುರಿಯುವಾಗ ವಾಯುಮಂಡಲದಲ್ಲಿನ ಮಾನವಜನ್ಯ ವಿಷಾನಿಲಗಳೊಡನೆ ಬೆರೆತು ದುರ್ಬಲ ಆಮ್ಲವಾಗಿ ನೆಲ ಮುಟ್ಟುತ್ತವೆ. ಇದೇ 'ಆಮ್ಲಮಳೆ'. ಆಮ್ಲ ಮಳೆಯ ಮೂಲ ಕಾರಣ ವಿಶ್ವದಾದ್ಯಂತ ಜನ ಬಳಸುತ್ತಿರುವ, ಉಸುರುತ್ತಿರುವ ವಿವಿಧ ಇಂಧನಗಳು, ತೈಲ ಅನಿಲ, ಕಲ್ಲಿದ್ದಲುಗಳಂತಹ ಉರುವಲುಗಳು.

ಮಳೆಗಾಲದಲ್ಲಿ ನಾವು ನೋಡುವ ಮಿಂಚು ಇದರ ಬಗೆಯೂ ಇಲ್ಲೊಂದು ಲೇಖನವಿದೆ.

ಮಿಂಚು ಮೂಡುವುದು ವಿದ್ಯುಚ್ಛಕ್ತಿಯ ಪ್ರವಹನದಿಂದಾಗಿ. ಗಾಳಿಯ ಕಣಿವೆಯ ಮೂಲಕ ಹರಿಯುವ ವಿದ್ಯುತ್ತಿನ ನದಿಯೇ ಮಿಂಚು. ಕೇವಲ ಮಿಂಚೊಂದು ಹರಿಯುವ ವೇಗ ಬೆಳಕಿನ ವೇಗದ ಅರ್ಧದಷ್ಟು. ಅಂದರೆ, ಸೆಕೆಂಡಿಗೆ ಒಂದೂವರೆ ಲಕ್ಷ ಕಿ.ಮೀ. ನಷ್ಟು. ಮಿಂಚುಗಳ ಆಯುಷ್ಯ ಒಂದು ಸೆಕೆಂಡಿನ ಹತ್ತರ ಒಂದಂಶದಿಂದ ಸಾವಿರದ ಒಂದಂಶ ಮಾತ್ರ. ಆದರೂ ಇದು ಮೂಡಿಸುವ ಮಹಾಶಾಖ ಅದರ ಸುತ್ತಲ ಗಾಳಿ ಪದರನ್ನು ಒಮ್ಮೆಗೆ ಕಾಯಿಸಿ ಬಿಡುತ್ತದೆ. ತಕ್ಷಣ ಗಾಳಿ ಸ್ಫೋಟಗೊಳ್ಳುತ್ತದೆ. ಭಯಂಕರ ಶಬ್ದ ಉಂಟು ಮಾಡುತ್ತದೆ. ಮಿಂಚಿನಿಂದ ಉದ್ಭವಿಸುವ ಶಾಖ ಮತ್ತು ನಮ್ಮಿಂದ ಮಿಂಚಿಗಿರುವ ದೂರ ಇವುಗಳನ್ನು ಅವಲಂಬಿಸಿ ಆ ಶಬ್ದ ಸಿಡಿಲಾಗಿ ಇಲ್ಲವೇ, ಗುಡುಗಾಗಿ ಕೇಳಿಸುತ್ತದೆ.

'ಮರಳು' ಇದರ ಬಗ್ಗೆಯೂ ಒಂದು ಆಸಕ್ತಿದಾಯಕ ಲೇಖನ ಇಲ್ಲಿದೆ. ಭೂಮಿಯ ಮೂಲ ಸತ್ವವಾದ ಶಿಲೆಗಳ ನೈಸರ್ಗಿಕ ಪುಡಿಯ ಮರಳು. ಇದು ಧರೆಯಲ್ಲಿ ಅತಿ ಪರಿಚಿತವಾಗಿರುವ ಅತಿ ಉಪಯುಕ್ತವಾಗಿರುವ ಧಾರಾಳವಾಗಿ ಎಲ್ಲೆಲ್ಲೂ ಕಂಡುಬರುವ ವಸ್ತುವಾಗಿದೆ. ಈ ಭೂಮಿಯ ನೆಲವನ್ನು ಆವರಿಸಿರುವ ಮಣ್ಣಿನ ಒಂದು ಪ್ರಧಾನ ಭಾಗ ಮರಳು ಕಣಗಳದ್ದೇ ಆಗಿದೆ. ಇದು ನದೀ ದಡದಲ್ಲಿ, ಸಮುದ್ರ ತೀರದಲ್ಲಿ ಅದೇ ರೀತಿ ಮರುಭೂಮಿಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ಇದರಲ್ಲಿರುವ ಮುಖ್ಯ ವಸ್ತು ಸಲಿಕಾ. ಕ್ವಾರ್ಟ್ಜ್ ಎಂದು ಸಾಮಾನ್ಯವಾಗಿ ಕರೆಯಲಾಗುವ ಖನಿಜ ವಸ್ತು ಇದರಲ್ಲಿದೆ. ಪೃಥ್ವಿಯಲ್ಲಿ ಅತಿ ಧಾರಾಳ ಪ್ರಮಾಣದಲ್ಲಿರುವ ಮೂಲ ವಸ್ತುಗಳಾದ ಸಿಲಿಕಾನ್ ಮತ್ತು ಆಮ್ಲಜನಕಗಳ ನೈಸರ್ಗಿಕ ವಿಶಿಷ್ಟ ಸಂಯುಕ್ತ ವಸ್ತುವಿದು. ಇದನ್ನು ಗಾಜಿನ ತಯಾರಿಕೆಯಲ್ಲಿ ಕಂಪ್ಯೂಟರಿನ ಜೀವಾಳವಾದ ಚಿಪ್‌ಗಳ ತಯಾರಿಕೆಯಲ್ಲಿ 'ಸಿಲಿಕೋನ್' ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ.

ಮೊಸರಿನ ಮಹತ್ವ, ಗುಲಾಬಿ ಆತ್ತರ್ ಇಂಜೆಕ್ಷನ್, ವೈರಸ್ ಹೀಗೆ ಹತ್ತು ಹಲವಾರು ಆಸಕ್ತಿದಾಯಕ ವಿಷಯಗಳ ಬಗ್ಗೆ ಇಲ್ಲಿ ಲೇಖನಗಳಿವೆ. ಅವು ಓದಿಸಿಕೊಂಡು ಹೋಗುತ್ತವೆ.

ಹೀಗೆ ಡಾ. ಹೆಬ್ರಿಯವರು ಈ ಪುಟ್ಟ ಕೃತಿಯಲ್ಲಿ ಬರೆದಿರುವ ವಿಷಯಗಳು ಮಕ್ಕಳಿಗೆ ಮಾತ್ರವಲ್ಲದೆ. ಹಿರಿಯರಲ್ಲಿ ಆಸಕ್ತಿಯನ್ನುಂಟು ಮಾಡುತ್ತವೆ. ಸರಳ ಭಾಷೆಯಲ್ಲಿ ಡಾ. ಹೆಬ್ರಿಯವರು ಈ ಕೃತಿಯನ್ನು ಮಕ್ಕಳ ಮೇಲಿನ ಪ್ರೀತಿಯಿಂದ ಬರೆದಿದ್ದಾರೆ.

'ಯುಗವತಾರಿ' ಇಂತಹ ಮೈಲಿಕ ಕೃತಿ ಬರೆದಿರುವ ಆತ್ಮೀಯ ಮಿತ್ರ ಡಾ. ಪ್ರದೀಪ್ ಕುಮಾರ್ ಹೆಬ್ರಿಯವರು ಕೈಯಾಡಿಸಿದ ಸಾಹಿತ್ಯ ಪ್ರಕಾರವಿಲ್ಲ. ನೂರೈವತ್ತಕ್ಕೂ ಮಿಕ್ಕಿ ಕೃತಿಗಳನ್ನು ಈಗಾಗಲೇ ಬರೆದಿರುವ ಇವರಿಂದ ಇನ್ನಷ್ಟು ಕೃತಿಗಳನ್ನು ಆಶಿಸುತ್ತಾ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

✍ ಡಾ. ಕರುಣಾಕರ್ ಎನ್. ಶೆಟ್ಟಿ ಪಣಿಯೂರ್

# ವಿಶ್ವ ರಕ್ತದಾನಿಗಳ ದಿನ

**ಭಾಗ – 1**

ಮಾನವನ ಜೀವ ಉಳಿಸಲು ಮಾನವನ ರಕ್ತವನ್ನು ಉಪಯೋಗಿಸುವುದು ಜಗತ್ತಿನ ಅತಿ ಮಹತ್ವದ ಸಂಶೋಧನೆಗಳಲ್ಲಿ ಒಂದಾಗಿದೆ. ಇದರಿಂದ ಹಲವಾರು ಜನರು ಸಾವಿನಿಂದ ಪಾರಾಗಿದ್ದಾರೆ. ಯಾವುದೇ ವ್ಯಕ್ತಿ ಇನ್ನೊಬ್ಬರ ಜೀವ ಉಳಿಸಲು ತನ್ನ ರಕ್ತವನ್ನು ಸ್ವಯಂ ಪ್ರೇರಿತವಾಗಿ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಕೊಡುವುದಕ್ಕೆ "ರಕ್ತದಾನ" ಎನ್ನುವರು. ರಕ್ತಕ್ಕೆ ನಿರಂತರವಾಗಿ ಬೇಡಿಕೆ ಇರುವುದರಿಂದ ತುರ್ತು ಸಂದರ್ಭಗಳಲ್ಲಿ ಜನರ ಜೀವ ಉಳಿಸಲು ಎಲ್ಲರೂ ರಕ್ತದಾನಕ್ಕೆ ಮುಂದಾಗಲೇ ಬೇಕಾಗಿದೆ. ದಾನಿಯ ರಕ್ತದಲ್ಲಿ ಕೆಂಪು ರಕ್ತಕಣ, ಪ್ಲಾಸ್ಮಾ ಪ್ಲೇಟ್‌ಲೆಟ್‌ಗಳು ಇರುತ್ತವೆ. ರಕ್ತವನ್ನು ಎಚ್.ಐ.ವಿ. ಹೆಪಟೈಟಿಸ್ ಬಿ, ಹೆಪಟೈಟಿಸ್ ಸಿ, ಗುಪ್ತರೋಗ (VDRL) ಹಾಗೂ ಮಲೇರಿಯಾ ಮುಂತಾದ ಪರೀಕ್ಷೆಯನ್ನು ಮಾಡಿದ ನಂತರವೇ ಅಗತ್ಯವುಳ್ಳ ವ್ಯಕ್ತಿಗೆ (ರೋಗಿಗೆ ರಕ್ತದ ಗುಂಪಿಗನುಸಾರವಾಗಿ ನೀಡಲಾಗುವುದು. ಶೇಖರಿಸಲಾದ ಕೆಂಪು ರಕ್ತ ಕಣಗಳು 35 ದಿನಗಳವರೆಗೆ ಮಾತ್ರ ತಮ್ಮ ಶಕ್ತಿಯನ್ನು ಉಳಿಸಿಕೊಂಡಿರುತ್ತದೆ. ಪ್ಲೇಟ್‌ಲೆಟ್‌ಗಳನ್ನು ಕೇವಲ 5 ದಿನಗಳವರೆಗೆ ಹಾಗೂ ಪ್ಲಾಸ್ಮಾವನ್ನು ಒಂದು ವರ್ಷದವರೆಗೆ ಶೇಖರಿಸಿ ಇಡಬಹುದು. ಪ್ಲೇಟ್‌ಲೆಟ್‌ಳ ಜೀವಿತಾವಧಿ ಬರೀ 5 ದಿನಗಳು ಇರುವುದರಿಂದ ರಕ್ತ ಬ್ಯಾಂಕಿಗೆ ರಕ್ತದಾನಿಗಳ ಅಗತ್ಯ ನಿರಂತರ ಇದ್ದೇ ಇರುತ್ತದೆ. ಡೆಂಗ್ಯೂ, ಮಲೇರಿಯಾ, ತೀವ್ರ ರಕ್ತಸ್ರಾವ ಮುಂತಾದ ಸಂದರ್ಭಗಳಲ್ಲಿ ಪ್ಲೇಟ್‌ಲೆಟ್‌ಗಳು ತೀವ್ರ ಕಡಿಮೆ ಆಗುವುದರಿಂದ ರೋಗಿಗಳಿಗೆ ಪ್ಲೇಟ್‌ಲೆಟ್‌ಗಳ ಅವಶ್ಯಕತೆ ತುರ್ತು ಪರಿಸ್ಥಿತಿಯಲ್ಲಿ ಇರುತ್ತದೆ. ಆದ್ದರಿಂದ ಇಂದಿನ ಸುಸಂಸ್ಕೃತ ಜನ ಸಮುದಾಯ ಹೆಚ್ಚಿನ ಸಂಖ್ಯೆಯಲ್ಲಿ ರಕ್ತದಾನ ಮಾಡದರೆ ಮಾತ್ರ ಅವಶ್ಯಕತೆ ಇರುವವರಿಗೆ ರಕ್ತ ನೀಡಿ ಜೀವ ಉಳಿಸಲು ಸಾಧ್ಯವಾಗಬಲ್ಲುದು.

ಪ್ರತೀ ವರ್ಷದ ಜೂನ್ 14ರಂದು "ವಿಶ್ವ ರಕ್ತದಾನಿಗಳ ದಿನ"ವನ್ನಾಗಿ ಆಚರಿಸಲ್ಪಡುತ್ತದೆ. ರಕ್ತದಾನದ ಬಗ್ಗೆ ಅನೇಕರಲ್ಲಿ ತಪ್ಪು ಕಲ್ಪನೆ ಇದೆ. ರಕ್ತದಾನ ಮಾಡಿದರೆ ನಿಶ್ಯಕ್ತಿ ಉಂಟಾಗಬಹುದು. ಕಾಯಿಲೆ ಬರಬಹುದು ಎಂಬ ಭಯವಿದೆ. ಆದರೆ ಸತ್ಯಾಂಶವೆಂದರೆ ರಕ್ತದಾನ ಮಾಡಿದರೆ ಆರೋಗ್ಯ ಮತ್ತಷ್ಟು ವೃದ್ಧಿಸುವುದು.

ರಕ್ತದ ಬಗ್ಗೆ ಕೆಲವು ಉಪಯುಕ್ತ ಮಾಹಿತಿಗಳೆಂದರೆ :–

* ಮಾನವ ರಕ್ತಕ್ಕೆ ಪರ್ಯಾಯವಾಗಿ ಬೇರೊಂದಿಲ್ಲ.

* ರಕ್ತವನ್ನು ಕೃತಕವಾಗಿ ಉತ್ಪಾದಿಸಲು ಸಾಧ್ಯವಿಲ್ಲ.

* ಮಾನವನ ದೇಹದ ತೂಕದಲ್ಲಿ ಪ್ರತಿಶತ 70ರಷ್ಟು ರಕ್ತದ ಭಾಗವಾಗಿರುತ್ತದೆ.

* ವಯಸ್ಕರೊಬ್ಬರ ರಕ್ತದಲ್ಲಿ 8ರಿಂದ 10 ಯೂನಿಟ್ ರಕ್ತ ಇರುತ್ತದೆ. (5ರಿಂದ 6 ಲೀಟರ್‌ಗಳಷ್ಟು)

* ರಕ್ತವು ಇಂಗಾಲದ ಡೈ ಆಕ್ಸೈಡ್ ಮತ್ತು ಮಲೀನ ತ್ಯಾಜ್ಯ ವಸ್ತುಗಳನ್ನು ದೇಹದ ಶುದ್ಧೀಕರಣ ಮಾಡುವ ಅಂಗಗಳಿಗೆ ರವಾನಿಸಿ, ದೇಹವನ್ನು ಶುದ್ಧವಾಗಿರಿಸಲು ಸಹಕರಿಸುತ್ತದೆ.

* ರಕ್ತವು ರೋಗತಡೆ ಮತ್ತು ಗಾಯವು ಮಾಸುವಂತೆ ಮಾಡಲು ಸಹಕರಿಸುತ್ತದೆ.

* ರಕ್ತದಾನ ಮಾಡುವಾಗ ಒಂದು ಚುಚ್ಚುಮದ್ದು ತೆಗೆದುಕೊಳ್ಳುವಾಗ ಆಗುವುದಕ್ಕಿಂತ ಹೆಚ್ಚಿನ ನೋವೇನೂ ಆಗುವುದಿಲ್ಲ. ಹಾಗೆಯೇ ರಕ್ತದಾನ ಮಾಡಿ ಸುಧಾರಿಸಿಕೊಳ್ಳಲು ಬರೀ ಇಪ್ಪತ್ತು ನಿಮಿಷ ಅವಧಿ ಸಾಕಾಗುತ್ತದೆ.

ನಮ್ಮ ದೇಶದಲ್ಲಿ ಪ್ರತಿ 2 ಸೆಕೆಂಡಿಗೆ ಒಬ್ಬ ರೋಗಿಗೆ ರಕ್ತದ ಅವಶ್ಯಕತೆ ಇರುತ್ತದೆ. ಥಲಸೇಮಿಯ (Thallassemia) ಹಾಗೂ ಲ್ಯೂಕೇಮಿಯಾ (Leukemia) ರೋಗಿಗಳಿಗೆ ಮಾತ್ರ ರಕ್ತದ ಬೆಲೆ ಏನೆಂದು ತಿಳಿದಿದೆ. ಪ್ರತಿ ಜೀವಿಯ ಬದುಕಿಗೆ ಇದು ಅನಿವಾರ್ಯವಾಗಿದ್ದರೂ ಕೂಡಾ ಈ ರೋಗಿಗಳಿಗೆ ಮಾತ್ರ ಅದರ ಅನಿವಾರ್ಯತೆ ಮತ್ತಷ್ಟು ಹೆಚ್ಚು. ಪ್ರತಿ ತಿಂಗಳಿಗೊಮ್ಮೆ, 2 ತಿಂಗಳಿಗೊಮ್ಮೆ ಈ ರೋಗಿಗಳಿಗೆ ರಕ್ತ ಚಲಾವಣೆ (Transfusion) ಮಾಡದಿದ್ದಲ್ಲಿ ಈ ರೋಗಿಗಳ ಉಸಿರಾಟ ಸ್ಥಗಿತಗೊಳ್ಳುವ ಸಂದರ್ಭ ಬರಬಹುದು. ಆದರೆ ರಕ್ತದ ಸರಬರಾಜಿನಲ್ಲಿ ಇರುವ ತೊಂದರೆಗಳಿಂದಾಗಿ ಈ ರೋಗಿಗಳು ಬದುಕಿಗಾಗಿ ಇನ್ನಷ್ಟು ಹೋರಾಡುವಂತೆ ಮಾಡಿದೆ.

ಪ್ರತೀ ವರ್ಷ ನಮ್ಮ ದೇಶದಲ್ಲಿನ ರಕ್ತದ ಬೇಡಿಕೆ ಸುಮಾರು 4 ಕೋಟಿ ಯುನಿಟ್‌ಗಳಾಗಿದ್ದು, ಕೇವಲ 5 ಲಕ್ಷ ಯೂನಿಟ್‌ಗಳ ರಕ್ತದ ಪೂರೈಕೆ ಮಾತ್ರ ಸಾಧ್ಯವಾಗುತ್ತಿದೆ. ಇದಕ್ಕೆ ಪರಿಹಾರವಿಲ್ಲವೇ ? ನಮ್ಮ ಉದಾರ ಮಾನವೀಯ ಗುಣವೇ ಇದಕ್ಕೆ ಅಲ್ಪಸ್ವಲ್ಪ ಪರಿಹಾರವಾಗಬಲ್ಲುದು. ನೀವು ಮಾಡಬೇಕಿರುವುದು ಇಷ್ಟೇ. ರಕ್ತದಾನ ಮಾಡುವ ದೃಢ ಮನಸ್ಸು ಮಾಡಿರಿ ಹಾಗೂ ವಿಳಾಸ ನೋಂದಾಯಿಸಿ. ತುರ್ತು ಸಂದರ್ಭಗಳಲ್ಲಿ ನಿಮ್ಮನ್ನು ಸಂಪರ್ಕಿಸಿ ನಿಮ್ಮಿಂದ ರಕ್ತದಾನ ಬಯಸಲಾಗುತ್ತದೆ. ರಕ್ತ ಬ್ಯಾಂಕಿನಿಂದ ಅಂತೆಯೇ ನಿಮಗೆ ರಕ್ತದ ಅಗತ್ಯವಾದಾಗ ಬೇರೆ ರಕ್ತದಾನಿಗಳ ಮೂಲಕವೂ ರಕ್ತದ ವ್ಯವಸ್ಥೆ ಮಾಡಲಾಗುವುದು. ಇದು ರಕ್ತ ಬ್ಯಾಂಕಿನ ಪದ್ಧತಿಯಾಗಿದೆ.

ರಕ್ತದಾನ ಮಾಡುವುದರಿಂದ ದೇಹಕ್ಕೆ ಅನಾಹುತ ಎಂಬ ಈ ಮೂಢಭಾವನೆಯನ್ನು ಬಿಡಬೇಕಾಗಿದೆ. ಇಂದಿನ ಜನಾಂಗ ರಕ್ತದಾನ ಮಾಡುವುದರಿಂದ ಆಗುವ ಉಪಯೋಗಗಳು ಬಹಳಷ್ಟಿವೆ. ಅವುಗಳು ಯಾವುದೆಂದರೆ :

ದೇಹದಲ್ಲಿ ಕಬ್ಬಿಣದಂಶ ಸರಿಯಾದ ಪ್ರವಾಣದಲ್ಲಿರುವಂತೆ ನೋಡಿಕೊಳ್ಳುತ್ತದೆ : ಇದರ ಬಗ್ಗೆ ನಡೆಸಿದ ಸಂಶೋಧನೆಯಿಂದ ರಕ್ತದಾನದಿಂದ

✍ ಶಾರದಾ ಎ. ಅಂಚನ್, ನವಿಮುಂಬಯಿ

ದೇಹದಲ್ಲಿ ಕಬ್ಬಿಣದಾಂಶವನ್ನು ಸಮ ಪ್ರಮಾಣದಲ್ಲಿ ಇಡಬಹುದೆಂದು ತಿಳಿದುಬಂದಿದೆ. ದೇಹದಲ್ಲಿ ಕಬ್ಬಿಣದಂಶ ಕಡಿಮೆಯಾದರೂ ಒಳ್ಳೆಯದಲ್ಲ. ಹಾಗೆಯೇ ಅಧಿಕವಾದರೂ ಕಷ್ಟ. ರಕ್ತದಲ್ಲಿ ಕಬ್ಬಿಣಾಂಶ ಅಧಿಕವಾದರೆ ಹೃದಯ ಸಂಬಂಧಿ ಕಾಯಿಲೆಗಳು ಬರುತ್ತವೆ. ಮಹಿಳೆಯರಿಗೆ ಮುಟ್ಟು ದೇಹದಲ್ಲಿ ಕಬ್ಬಿಣದ ಅಂಶ ಸರಿಯಾದ ರೀತಿಯಲ್ಲಿರುವಂತೆ ನೋಡಿಕೊಳ್ಳುತ್ತದೆ. ಪುರುಷರು ಮತ್ತು ಮುಟ್ಟು ನಿಂತ ಮಹಿಳೆಯರು ದೇಹದಲ್ಲಿ ಕಬ್ಬಿಣಾಂಶ ಸರಿಯಾದ ಪ್ರಮಾಣದಲ್ಲಿ ಇಡಲು ರಕ್ತದಾನ ಸಹಾಯ ಮಾಡುತ್ತದೆ. ಹಾಗೆಯೇ ಇನ್ನೊಂದು ಜೀವದ ರಕ್ಷಣೆಗೂ ಸಹಾಯವಾದಂತಾಗುತ್ತದೆ. ರಕ್ತದಾನ ಮಡುವುದರಿಂದ ದಾನಿಯ ದೇಹದಲ್ಲಿ ಹೊಸ ರಕ್ತ ಉತ್ಪತ್ತಿಯಾಗಲು ಪ್ರಚೋದನೆ ಆಗುತ್ತದೆ. ಹಾಗೆಯೇ ಹೊಸ ರಕ್ತ ಚಲನೆಯಿಂದ ಕಾರ್ಯತತ್ಪರತೆ, ಜ್ಞಾಪಕಶಕ್ತಿ ವೃದ್ಧಿಯಾಗುತ್ತದೆ. ರಕ್ತದಲ್ಲಿ ಕಬ್ಬಿಣಾಂಶ ಸರಿಯಾದ ಪ್ರಮಾಣದಲ್ಲಿದ್ದರೆ ಗಂಟಲಿನ ಕ್ಯಾನ್ಸರ್, ಕರುಳಿನ ಕ್ಯಾನ್ಸರ್ ಬರದಂತೆ ತಡೆಯುತ್ತದೆ ಕೂಡಾ. ರಕ್ತದಾನ ಮಾಡುವುದರಿಂದ ಕೊಲೆಸ್ಟ್ರಾಲ್ ಪ್ರಮಾಣ ಕೂಡಾ ಜಾಸ್ತಿಯಾಗದಂತೆ ತಡೆಯಬಹುದು. ಕೊಲೆಸ್ಟ್ರಾಲ್ ಅಂಶ ಜಾಸ್ತಿಯಾದರೆ ಹೃದಯದ ತೊಂದರೆಗಳು ಕಾಣಿಸಿಕೊಳ್ಳುತ್ತವೆ. ರಕ್ತದಾನ ಮಾಡಿದಾಗ ಆ ರಕ್ತ ತುಂಬಲು ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ. ಹೊಸ ರಕ್ತ ಕಣಗಳು ಉತ್ಪತ್ತಿಯಾಗುತ್ತವೆ. ಒಂದು ವೇಳೆ ದೇಹಕ್ಕೆ ಗಾಯವಾಗಿ ಹೆಚ್ಚು ರಕ್ತ ಹೋದರೆ ಬೇಗನೆ ಹೊಸ ರಕ್ತಕಣಗಳು ಉತ್ಪತ್ತಿಯಾಗಿ ನಮ್ಮ ದೇಹಕ್ಕೆ ಶಕ್ತಿಯನ್ನು ತುಂಬುವಂತೆ ಮಾಡುತ್ತದೆ.

ಅಲ್ಲದೆ ರಕ್ತದಾನದ ಮುನ್ನ ವೈದ್ಯರಿಂದ ರಕ್ತದಾನಿಯ ಆರೋಗ್ಯದ ತಪಾಸಣೆ ನಡೆಸಲಾಗುವುದು. ಇದರಿಂದ ಕೆಲವೊಮ್ಮೆ ದಾನಿಗೆ ತಿಳಿಯದ ಏನಾದರೂ ಕಾಯಿಲೆ ಇದ್ದರೆ ತಿಳಿದು ಬರುವ ಸಾಧ್ಯತೆ ಇದೆ. ನಮ್ಮ ರಕ್ತದಾನಕ್ಕೆ ವೈದ್ಯರು ಒಪ್ಪಿದರೆ ನಾವು ಆರೋಗ್ಯವಂತರು ಎಂದು ತಿಳಿದು ಸಂತೋಷ ಕೂಡಾ ಆಗುವುದು. ರಕ್ತದಾನ ಮಾಡಿ ಇನ್ನೊಬ್ಬರ ಜೀವ ಉಳಿಸಿದ ತೃಪ್ತಿ, ಧನ್ಯತಾ ಭಾವ ಕೂಡಾ ಮೂಡುವುದು. ಅದರೊಂದಿಗೆ ನಮ್ಮ ಆರೋಗ್ಯ ಕೂಡಾ ವೃದ್ಧಿಯಾಗುವುದು.

**ರಕ್ತದಾನ ಯಾರು ಮಾಡಬಹುದೆಂದರೆ :**

ವಯಸ್ಸು ಹದಿನೆಂಟರಿಂದ 55 ವರ್ಷದ ಒಳಗಿನವರು ಆಗಿರಬೇಕು. ಹಾಗೆಯೇ ದೇಹದ ತೂಕ 45 ಕೆಜಿಗಿಂತ ಜಾಸ್ತಿ ಆಗಿರಬೇಕು. ರಕ್ತದಾನ ಮಡುವ ಸಮಯದಲ್ಲಿ ದಾನಿಯು ಯಾವುದೇ ರೀತಿಯ ಖಾಯಿಲೆಯಿಂದ ಬಳಲುತ್ತಿರಬಾರದು ಮತ್ತು ಯಾವುದೇ ರೀತಿಯ ಔಷಧಿ ಸೇವನೆ ಕೂಡಾ ಮಾಡುತ್ತಿರಬಾರದು. ರಕ್ತದಾನದ ಮಹತ್ವದ ಅರಿವು ಹೊಂದಿದ ಯಾವುದೇ ವ್ಯಕ್ತಿ ಸ್ವಯಂ ಪ್ರೇರಣೆಯಿಂದ ರಕ್ತದಾನ ಮಾಡಬಹುದು. ಪ್ರತಿ ಮೂರು ತಿಂಗಳ ನಂತರ ದಾನಿ ಪುನಾಃ ರಕ್ತದಾನ ಮಾಡಬಹುದು.

ರಕ್ತದಾನದ ಮಹತ್ವ ಎಲ್ಲರಿಗೂ ಖಂಡತಾ ತಿಳಿದೇ ಇದೆ. ಇಪ್ಪತ್ತೊಂದನೇ ಶತಮಾನದ ಆಧುನಿಕ ಯಂತ್ರ, ತಾಂತ್ರಿಕತೆಗಳ ವೈಜ್ಞಾನಿಕ ಯುಗದಲ್ಲಿದ್ದರೂ ರಕ್ತವೆನ್ನುವುದು ಮಾನವನ ದೇಹವೇ ತಯಾರು ಮಾಡಬಲ್ಲ ಒಂದು ಅಮೂಲ್ಯ ವಸ್ತು. ಎಷ್ಟೇ ಹಣವಂತನಿಗೂ ರಕ್ತವನ್ನು ಬೇರೆಲ್ಲೂ ಖರೀದಿಸುವಂತಿಲ್ಲ. ರಕ್ತದಾನಿಯೇ ಮಹಾದಾನಿ. ವಿಶ್ವ ರಕ್ತದಾನಿಗಳ ದಿನವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ ತಾವು ರಕ್ತದಾನಕ್ಕೆ ಯೋಗ್ಯವಾಗಿದ್ದೇವೆ ಎಂದು ಕೊಂಡವರೆಲ್ಲಾ ಸಮೀಪದ ರಕ್ತ ಬ್ಯಾಂಕಿನಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡರೆ ಅಗತ್ಯವಿದ್ದಾಗ ರಕ್ತದಾನ ನೀಡಿ ಒಂದು ಜೀವಕ್ಕೆ ಆಸರೆಯಾಗಬಹುದು ಎನ್ನುವುದು ನನ್ನ ಆಶಯ.

"DONATE BLOOD - SAVE LIFE"

# ಮುಂಬಯಿ ವಿಶ್ವವಿದ್ಯಾಲಯ ಕನ್ನಡ ಎಂ.ಎಗೆ ಅರ್ಜಿ ಆಹ್ವಾನ

ಮುಂಬಯಿ : ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯವು ಕನ್ನಡ ಎಂ. ಎ (ಸೆಮಿಸ್ಟರ್) ಪ್ರಥಮ ವರ್ಷ ತರಗತಿಗೆ ಅರ್ಜಿಗಳನ್ನು ಆಹ್ವಾನಿಸಿದೆ. ಬಿ.ಎ, ಬಿ.ಕಾಂ, ಬಿ.ಎಸ್ಸಿ ಉತ್ತೀರ್ಣರಾದವರು ಅರ್ಜಿಯನ್ನು ಸಲ್ಲಿಸಬಹುದು. 2017 – 2018ನೇ ಸಾಲಿನ ತರಗತಿಗಳಿಗೆ ಸೇರಬಯಸುವ ಅರ್ಹ ಅಭ್ಯರ್ಥಿಗಳು ವಿಭಾಗದ ಕಛೇರಿಯಿಂದ ಹೆಚ್ಚಿನ ಮಾಹಿತಿಯನ್ನು ಪಡೆದು ಕೊಳ್ಳಬಹುದು. ಅರ್ಜಿಗಳನ್ನು ಅಂಚೆ ಮೂಲಕ ತರಿಸಿಕೊಳ್ಳುವ ಅಭ್ಯರ್ಥಿಗಳು ಈ ಕೆಳಗಿನ ವಿಳಾಸಕ್ಕೆ ಸ್ವವಿಳಾಸ ಹೊಂದಿದ ಹತ್ತು ರೂಪಾಯಿಗಳ ಸ್ಟಾಂಪ್ ಹಚ್ಚಿದ ಕವರುಗಳನ್ನು ಲಗತ್ತಿಸಿ ವ್ಯವಹರಿಸಬೇಕು.

ಡಾ. ಜಿ. ಎನ್. ಉಪಾಧ್ಯ, ಮುಖ್ಯಸ್ಥರು, ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ರಾನಡೆ ಭವನ, ವಿದ್ಯಾನಗರಿ, ಸಾಂತಾಕ್ರೂಜ್, (ಪೂರ್ವ) ಮುಂಬಯಿ–400 098 (ದೂರವಾಣಿ ಸಂಖ್ಯೆ, 26543530, 26543469,26543345)Email: kannadadepartment@gmail.com (University Website www.mu.ac.in)

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅರ್ಹ ವಿದ್ಯಾರ್ಥಿಗಳಿಗೆ ವಾರ್ಷಿಕ 25,000 ರೂಪಾಯಿ ಹಾಗೂ ಕರ್ನಾಟಕ ಸಂಘ ಮುಂಬಯಿ ವಾರ್ಷಿಕ ಮೂರು ಸಾವಿರ ರೂ. ವಿದ್ಯಾರ್ಥಿವೇತನ ನೀಡುತ್ತಿದೆ. ತುಂಬಿದ ಅರ್ಜಿಯನ್ನು ಜುಲೈ ತಿಂಗಳ ದಿನಾಂಕ 15ರೊಳಗೆ ತಲುಪುವಂತೆ ಕಳುಹಿಸಿಕೊಡಲು ವಿಭಾಗದ ಪ್ರಕಟಣೆ ತಿಳಿಸಿದೆ.

## ಕವಿತೆ

ನೋವುಗಳು
ಎದೆಗೂಡಿನಲಿ
ಢಿಕ್ಕಿ ಹೊಡೆದು
ಅತ್ತಾಗ
ಸಾಂತ್ವೈಸಲು ಬಂದ
'ಮಹಾಮಾತೆ'!

***

**ಖಿನ್ನತೆ**

ಎದೆ ಕಂದರದಿ
ಬಿದ್ದ ಪುಟ್ಟ ಮಗು
ದಾರಿತಪ್ಪಿ
ಅತ್ತಂತೆ ಸದ್ದು!

*- ಶೋಭಾ ಪ್ರಮೋದ್*

**ನೇಸರು ಜಾಗತಿಕ ಕನ್ನಡ ಕವನ ಸ್ಪರ್ಧೆ-2016ರಲ್ಲಿ ಬಂದ ಕವನ**



**ನೇಸರು ಜಾಗತಿಕ ಮಾಸ್ತಿ ಸ್ಮರಣಾರ್ಥ ಸಣ್ಣ ಕತೆ ಸ್ಪರ್ಧೆಗೆ ಬಂದ ಕಥೆ**

# ಬಸಿರ ಪೆಟ್ಟಿಗೆಗಳು ಬಾಡಿಗೆಗಿವೆ

ಈ ಮಹಾನಗರಗಳಿಗೆ ನಿದ್ದೆಯೆಂಬುದೇ ಇಲ್ಲ. ಬೆಳಗಿನಿಂದ ಹಿಡಿದು ಮುಂದಿನ ಬೆಳಗಿನವರೆಗೂ ಅದೇ ದಾವಂತದ ಬದುಕು. ಕತ್ತಲು ಮೈತುಂಬುವ–ವರೆಗೂ ಹೊರಗಿನ ಸಂತೆ. ಬೆಳಕು ಮೂಡುವವರೆಗೂ ಒಳಗಿನ ಸಂತೆ. ಏನೇ ಆಗಲಿ ಎಲ್ಲರೂ ಮಾಡುವುದು ಹೊಟ್ಟೆಯನ್ನು ಹೊರೆಯಲೆಂದೇ. ವಿಚಿತ್ರವೆಂದರೆ ಇಲ್ಲಿ ಬೆಳಗಿನ ಹೊತ್ತು ಕತ್ತಲೆಯನ್ನು ಹೊದ್ದುಕೊಂಡರೆ, ರಾತ್ರಿ ಬೆಳಕನ್ನು ಮೈಮೇಲೆ ಎಳೆದುಕೊಳ್ಳುತ್ತಾರೆ. ಇರುವ ಬೆಳಕನ್ನು ಮರೆಮಾಚಿ ಹಗಲನ್ನು ಕತ್ತಲನ್ನಾಗಿಸುತ್ತಾರೆ. ತರಾವರಿಯ ವಿದ್ಯುತ್ ದೀಪಗಳಿಂದ ಸಿಂಗರಿಸಿ ಕತ್ತಲನ್ನು ಬೆಳಗಾಗಿಸುತ್ತಾರೆ. ರಾತ್ರಿ ಮಾಡಬೇಕಾದ ನಿದ್ದೆಯನ್ನು ಮುಂದೂಡಿ "ನೈಟ್ ಷಿಫ್ಟ್" ಎಂಬ ಹೆಸರಲ್ಲಿ ಮೈಗೂ ಮನಸಿಗೂ ಕೆಲಸ ಕೊಡುತ್ತಾರೆ. ಸೂರ್ಯ ಬಾನಿಂದ ಇಣುಕಿ ನೋಡುವ ಮೊದಲೇ ಹಕ್ಕಿಗಳು ಗೂಡಿನಿಂದ ಹಾರಿ ಕಲರವವನ್ನೆಬ್ಬಿಸುವುದರಲ್ಲೇ ಇವರು ಹಾಸಿಗೆ ಸೇರಿ ನಿದ್ರೆಯ ಆಳಕ್ಕೆ ಇಳಿಯುತ್ತಾರೆ. ಇದು ಈ ಮಹಾನಗರಗಳಿಗಿರುವ ಅನಿವಾರ್ಯತೆ.

ಭಾನುವಾರದ ಒಂದು ಬೆಳಿಗ್ಗೆ ಮನೆ ಮನೆಗಳನ್ನು ತಲುಪಿದ ಸುದ್ದಿ ಪತ್ರಿಕೆಗಳ ಒಡಲಿಂದ ಉದುರಿದ ಒಂದು ಜಾಹೀರಾತು ಮಹಾನಗರದ ಮನಗಳ ಗಮನವನ್ನು ಸೆಳೆಯಿತು. "ಬಸಿರ ಪೆಟ್ಟಿಗೆಗಳು ಬಾಡಿಗೆಗಿವೆ". ಸಂತಾನ ಭಾಗ್ಯಕ್ಕಾಗಿ ಹಂಬಲಿಸುತ್ತಿರುವಿರಾ?, ಮಗು ಪಡೆಯುವ ವಯಸ್ಸು ಮೀರಿದೆಯೇ?, ವೃತ್ತಿಯ ಕಾರಣದಿಂದ ಗರ್ಭ ಧರಿಸುವುದನ್ನು ಮುಂದೂಡುತ್ತಿರುವಿರಾ?, ಬಾಣಂತನದ ಸಮಸ್ಯೆಯೆ?, ಬನ್ನಿ ಈ ಎಲ್ಲ ಸಮಸ್ಯೆಗಳಿಗೂ ನಮ್ಮಲ್ಲಿದೆ ಪರಿಹಾರ. ಎಂಬ ಒಕ್ಕಣೆಯನ್ನು ಹೊಂದಿದ್ದ ಆ ಬ್ರೋಚರ್‌ನ ಕೆಳ ಅಂಚಿನಲ್ಲಿ ವೈದ್ಯರ ಹೆಸರು, ವಿಳಾಸ, ದೂರವಾಣಿ ಸಂಖ್ಯೆಗಳನ್ನು ದೊಡ್ಡ ಅಕ್ಷರಗಳಲ್ಲಿ ಮುದ್ರಿಸಲಾಗಿತ್ತು. ವಿದೇಶದಲ್ಲಿ ತರಬೇತಿಯನ್ನು ಹೊಂದಿದ, ಹತ್ತು ವರ್ಷಗಳ ಕಾಲ ಅಲ್ಲಿಯೇ ನೆಲೆಸಿ ಸೇವೆ ಸಲ್ಲಿಸಿದ ಡಾಕ್ಟರ್ ಅಗರ್‌ವಾಲ್ ದಂಪತಿಗಳ ವಿವರ ಅದಾಗಿತ್ತು. ಇದೀಗ ತಮ್ಮ ಸೇವೆಯನ್ನು ತಾಯ್ನಾಡಿನಲ್ಲಿ ಸಲ್ಲಿಸಲು ಬಂದುದಾಗಿ ಅದರಲ್ಲಿ ಬರೆಯಲಾಗಿತ್ತು. ಈ ಜಾಹೀರಾತನ್ನು ಕಂಡ ಅದೆಷ್ಟೋ ದಂಪತಿಗಳಲ್ಲಿ ಆಸೆಯ ಮಿಣುಕೊಂದು 'ಫಳಕ್' ಎಂದಿತ್ತು.ಒಂದೇ ಮನೆಯಲ್ಲಿದ್ದರೂ ಒಬ್ಬರನ್ನೊಬ್ಬರು ಸಂಧಿಸಲಾಗದ ಅನಿವಾರ್ಯತೆಗೆ ತಮ್ಮನ್ನು ತಾವು ಒಡ್ಡಿಕೊಂಡವರು, ನೈಟ್ ಷಿಫ್ಟ್‌ಗಳ ಜಾಲದಲ್ಲಿ ಸಿಲುಕಿ ಸಧ್ಯಕ್ಕೆ ಮಗು ಬೇಡವೆಂದುಕೊಳ್ಳುತ್ತಲೇ ನಲವತ್ತರ ಗಡಿಗೆ ಬಂದು ನಿಂತವರು, ಎಂದೋ ಒಂದು ದಿನ ಜ್ಞಾನೋದಯವಾಗಿ ಮಗು ಮಾಡಿಕೊಳ್ಳಲು "ದಿಸ್ ಇಸ್ ದ ರೈಟ್ ಟೈಮ್" ಎಂದು ರಾಂಗ್ ಟೈಮ್‌ನ್ನು ಆಯ್ದುಕೊಂಡವರು, ಎರಡು ಮೂರು ವರ್ಷಗಳಿಂದಲೂ ಪ್ರಯತ್ನಿಸಿ ಫಲ ಸಿಗದಾದಾಗ ಕಂಡ ಕಂಡ ಆಸ್ಪತ್ರೆಯ ಬಾಗಿಲು ಬಡಿದವರು, ಮಗುವನ್ನು ಹೊತ್ತು ಹೆತ್ತು ಈ ಭೂಮಿಗೆ ತರಬಹುದು. ಆದರೆ ನಂತರ ಅದನ್ನು ನೋಡಿಕೊಳ್ಳುವವರು ಯಾರು? ಬಾಣಂತನ ಮಾಡುವ ಅಮ್ಮನೆಂಬ ಜೀವ ಇಲ್ಲದ ಹೆಣ್ಣು ಮಕ್ಕಳು, ಹೀಗೆ ನೂರಾರು ಬಗೆಯ ಸಮಸ್ಯೆಗಳನ್ನು ಹೊಂದಿದ ಮಹಾನಗರದ ಜನರಿಗೊಂದು ಸದಾವಕಾಶ ದೊರೆತಿತ್ತು. ಈ ಸೆನ್ಸೇಷನಲ್ ಜಾಹೀರಾತಿನಿಂದ ಮಕ್ಕಳಿಲ್ಲದವರಿಗೆ ಪುಕ್ಕಟೆ ಸಲಹೆಗಳು ಸಿಗಲಾರಂಭಿಸಿದವು. ಹೆತ್ತವರಿಂದ ಮಕ್ಕಳಿಗೆ, ಸ್ನೇಹಿತರಿಂದ ಸ್ನೇಹಿತರಿಗೆ ಹೀಗೆ ಒಬ್ಬರಿಂದ ಇನ್ನೊಬ್ಬರ ಕಿವಿಗಳಿಗೆ ವಿಷಯ ತಾಕಲಾರಂಭಿಸಿದಾಗ ಕಿರಿ ಕಿರಿ ಎನ್ನಿಸಿದರೂ ಒಮ್ಮೆ ಪ್ರಯತ್ನಿಸುವುದರಲ್ಲಿ ತಪ್ಪೇನಿಲ್ಲ ಎನ್ನಿಸಿದ್ದು ಸುಳ್ಳೇನಲ್ಲ.

ಜಾಹೀರಾತು ಪ್ರಕಟಗೊಂಡ ದಿನದಿಂದಲೇ ಡಾಕ್ಟರ್ ಅಗರ್‌ವಾಲ್ ಆಸ್ಪತ್ರೆಗೆ ಸಾವಿರಾರು ದೂರವಾಣಿ ಕರೆಗಳು ಬರತೊಡಗಿದವು. ಫೋನಾಯಿಸಿದ ವ್ಯಕ್ತಿಗಳು ಹಲೋ ಎಂದೊಡನೆಯೇ ಅತ್ತ ಕಡೆಯಿಂದ ಮಧುರವಾದ ಧ್ವನಿ ಮುದ್ರಿಕೆಯೊಂದು ಉಲಿಯತೊಡಗುತ್ತಿತ್ತು. "ಈ ಜಾಹೀರಾತು ಕುರಿತಂತೆ ಸಮಗ್ರ ಮಾಹಿತಿಯನ್ನು ತಿಳಿದುಕೊಳ್ಳಲು ಡಾಕ್ಟರ್ ಅಗರ್‌ವಾಲ್ ರವರ ಆಸ್ಪತ್ರೆಗೆ, ಬರುವ ಭಾನುವಾರದಂದು ಬೆಳಿಗ್ಗೆ ಹನ್ನೊಂದು ಗಂಟೆಗೆ ಬರಬೇಕಾಗಿ ಹೇಳಿ ಕರೆ ಕಡಿತಗೊಳ್ಳುತ್ತಿತ್ತು. ಮಹಾನಗರದ ಜನರ ಕುತೂಹಲಕ್ಕೆ ರೆಕ್ಕೆ ಪುಕ್ಕಗಳು ಮೂಡತೊಡಗಿ ಎಲ್ಲೆಂದರಲ್ಲಿ, ಹೇಗೆಂದರ್‍ಥೆಗೆ ಹಾರತೊಡಗಿದವು. ನವ ಮಾಸಗಳ ಕಾಲ ತಾಯ ಗರ್ಭದಲ್ಲಿ ಬೆಳೆಯಬೇಕಾದ ಮಗುವನ್ನು ಒಂದು ಪೆಟ್ಟಿಗೆಯಲ್ಲಿಟ್ಟು ಬೆಳೆಸುವುದೆಂದರೆ? ಇದು ನಂಬುವಂತಹ ಮಾತೆ? ಅದೆಂತಹ ಪೆಟ್ಟಿಗೆ ಇರಬಹುದು? ಅದರಲ್ಲಿ ಮಗು ಬೆಳೆಯುವುದಾದರೂ ಹೇಗೆ? ಹೆಣ್ಣಿಗೆ ಹೊರುವ ಹೆರುವ ಕಷ್ಟವೇ ಇಲ್ಲ. ಪೇಟೆಗೆ ಹೋಗಿ ಬ್ರೆಡ್ಡನ್ನೋ, ಹಾಲಿನ ಪೊಟ್ಟಣವನ್ನೋ ತಂದಷ್ಟೇ ಸುಲಭವಾಗಿ ತಮ್ಮದೇ ರಕ್ತವನ್ನು ಹಂಚಿಕೊಂಡು ಹುಟ್ಟುವ ಮಗುವನ್ನು ಪಡೆಯುವುದೆಂದರೆ? ವೈದ್ಯಕೀಯ ಕ್ಷೇತ್ರ ಅದೆಷ್ಟು ಮುಂದುವರೆದಿದೆ? ಇಷ್ಟೊಂದು ಸಲೀಸಾಗಿ ಮಗುವನ್ನು ಪಡೆಯುವುದಾದರೆ ಮನೆಗೊಂದೇ ಮಗುವೇಕೆ? ಇನ್ನೂ ಒಂದು ಮಗುವನ್ನು ಮಾಡಿಕೊಳ್ಳಬಹುದಲ್ಲ? ಹೀಗೆ ತಲೆಗೊಂದರಂತೆ ಊಹೆ, ವಿಚಾರಗಳು ಮಹಾನಗರದ ಜನರ ತಲೆಗೆ ಸೇರ್ಪಡೆಯಾಗತೊಡಗಿದವು. ಇತ್ತೀಚೆಗೆ ವಿದೇಶದಲ್ಲಿ ಜನರು "ಬಾಕ್ಸ್ ಬೇಬಿ" ಪದ್ಧತಿಯ ಮೂಲಕವೇ ಮಕ್ಕಳನ್ನು ಪಡೆಯುತ್ತಿರುವುದಾಗಿಯೂ, ಶ್ರಮ, ವೇಳೆಯ ಸದುಪಯೋಗವನ್ನು ಗಮನದಲ್ಲಿಟ್ಟುಕೊಂಡು ಈ ಪದ್ಧತಿಯನ್ನು ಸಂಶೋಧಿಸಿರುವುದಾಗಿಯೂ ಡಾಕ್ಟರ್ ಅಗರ್‌ವಾಲ್‌ರವರು ಮೆಡಿಕಲ್ ಜರ್ನಲ್ ಒಂದರಲ್ಲಿ ಬರೆದಿದ್ದರು.

**✍ ಗೌರಿ ಚಂದ್ರಕೇಸರಿ**

ತಮ್ಮಲ್ಲಿ ಹುಟ್ಟಿಕೊಳ್ಳುತ್ತಿರುವ ಅನುಮಾನ, ಚಿತ್ರ ವಿಚಿತ್ರ ಪ್ರಶ್ನೆಗಳಿಗೆ ಉತ್ತರ ಸಿಗಲಾರದೇ ಮಹಾನಗರದ ಜನರು ರಾತ್ರಿಯೆಲ್ಲ ನಿದ್ರೆ ಇಲ್ಲದೆ ಮಗ್ಗಲು ಬದಲಾಯಿಸತೊಡಗಿದರು. ಆ ಭಾನುವಾರ ಯಾವಾಗ ಬರುವುದೆಂದು ಕ್ಷಣಗಣನೆಗೆ ತೊಡಗಿದರು.

ನೂತನವಾಗಿ ಆರಂಭಗೊಂಡಿದ್ದ ಡಾಕ್ಟರ್ ಅಗರ್‌ವಾಲ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಭಾನುವಾರ ಬೆಳಗಿನ ಹತ್ತು ಗಂಟೆಯಿಂದಲೇ ಗಿಜಿ ಗಿಜಿ ಎನ್ನತೊಡಗಿತು. ದಂಪತಿಗಳಿಗೆಲ್ಲ ಕುಳಿತುಕೊಳ್ಳಲು ಸೆಮಿನಾರ್ ಹಾಲ್‌ನಲ್ಲಿ ವ್ಯವಸ್ಥೆಯಾಗಿತ್ತು. ಹವಾನಿಯಂತ್ರಿತ ಹಾಲ್‌ನಲ್ಲಿ ಮಧುರವಾದ ಸಂಗೀತ ತೇಲಿ ಬರುತ್ತಿತ್ತು. ಹನ್ನೊಂದು ಗಂಟೆಯ ವೇಳೆಗೆ ಡಾಕ್ಟರ್ ಅಗರ್‌ವಾಲ್ ದಂಪತಿಗಳು ವೇದಿಕೆಯ ಮೇಲಿರುವ ಸೋಫಾದಲ್ಲಿ ಆಸೀನರಾದರು. ಆಸ್ಪತ್ರೆಯ ಜನರಲ್ ಮ್ಯಾನೇಜರ್ ಎಂದು ತಮ್ಮನ್ನು ತಾವು ಪರಿಚಯಿಸಿಕೊಂಡ ವ್ಯಕ್ತಿಯೊಬ್ಬರು ಡಾಕ್ಟರ್ ಅಗರ್‌ವಾಲ್ ದಂಪತಿಗಳನ್ನು ಕುರಿತಂತೆ ಕೂಲಂಕುಷವಾಗಿ ಪರಿಚಯಿಸಿದ್ದರು. ಮಗುವನ್ನು ಹೊಂದುವಲ್ಲಿ ಬರುವ ಸಮಸ್ಯೆಗಳು, ಮಗುವಿನ ಪಾಲನೆ ಪೋಷಣೆ ಇಂದಿನ ದಿನಗಳಲ್ಲಿ ಒಂದು ಸವಾಲಾಗಿದ್ದು ಈ ನಿಟ್ಟಿನಲ್ಲಿ ಅಗರ್‌ವಾಲ್ ಆಸ್ಪತ್ರೆ ತನ್ನ ಸೇವೆಯನ್ನು ಸಲ್ಲಿಸುತ್ತಿದೆ. ಇತ್ತೀಚಿನ ಸಂಶೋಧನೆಯಾದ "ಬಾಕ್ಸ್ ಬೇಬಿ" ಪದ್ಧತಿ ಅತ್ಯಂತ ಸರಳವಾದ ಹಾಗೂ ಮುಂದುವರಿದ ತಂತ್ರಜ್ಞಾನವಾಗಿದ್ದು ಎಲ್ಲ ವರ್ಗದ ಜನರಿಗೂ ನಿಲುಕುವಂತಹದ್ದಾಗಿದೆ ಎಂದು ಮ್ಯಾನೇಜರ ವಿವರಿಸುತ್ತ ಹೊರಟರು. ಈಗಾಗಲೇ ವಿದೇಶಗಳಲ್ಲಿ ಅನೇಕ ದಂಪತಿಗಳು ಈ ಪದ್ಧತಿಯನ್ನು ಅಳವಡಿಸಿಕೊಂಡು ಮಕ್ಕಳನ್ನು ಪಡೆದಿದ್ದಾಗಿಯೂ, ಅವರಲ್ಲಿ ಮೊದಲ ಬಾಕ್ಸ್ ಬೇಬಿಯನ್ನು ಪಡೆದ ದಂಪತಿಗಳು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿರುವುದಾಗಿಯೂ ಹೇಳಿದರು. ಅಲ್ಲದೇ ಈ ಬಾಕ್ಸ್ ಬೇಬಿ ಕುರಿತಾಗಿ ಒಂದು ವೀಡಿಯೋ ಪ್ರದರ್ಶನವನ್ನೂ ತಾವು ನೋಡಲಿದ್ದೀರಿ. ಕೊನೆಯಲ್ಲಿ ಡಾಕ್ಟರ್ ಅಗರ್‌ವಾಲ್ ದಂಪತಿಗಳು ತಮ್ಮೊಂದಿಗೆ ಇಂಟರ್‍ಯಾಕ್ಷನ್ ಮಾಡುವ ಮೂಲಕ ತಮ್ಮ ಪ್ರಶ್ನೆಗಳಿಗೆಲ್ಲ ಉತ್ತರಿಸಲಿದ್ದಾರೆ ಎಂದು ಮ್ಯಾನೇಜರ್ ಹೇಳಿ ಮುಂದಿನ ಕಾರ್‍ಯಕ್ರಮವಾದ ವೀಡಿಯೋ ಪ್ರದರ್ಶನಕ್ಕೆ ಅನುವು ಮಾಡಿ ಕೊಟ್ಟರು.

ಬಾಕ್ಸ್ ಬೇಬಿ ವೈದ್ಯಕೀಯ ಕ್ಷೇತ್ರದಲ್ಲೊಂದು ಮಹತ್ತರವಾದ ಸಾಧನೆ. ದಂಪತಿಗಳು ಒಂದೇ ಒಂದು ಬಾರಿ ವೈದ್ಯರಲ್ಲಿ ಹೋಗಿ ಅರ್ಧ ಗಂಟೆ

ವ್ಯಯಿಸಿದರೆ ಸಾಕು. ಪ್ರಣಾಳ ಶಿಶುವಿನ ಮುಂದುವರೆದಿರುವ ಭಾಗದಂತಿರುವ ಪ್ರಕ್ರಿಯೆಯೇ ಬಾಕ್ಸ್ ಬೇಬಿ. ಗರ್ಭಕೋಶದ ಎಲ್ಲ ಅಂಶಗಳನ್ನೂ ಆಧಾರವಾಗಿಟ್ಟುಕೊಂಡು ತಯಾರಿಸಿದ ಈ ಗಾಜಿನ ಪೆಟ್ಟಿಗೆಯಲ್ಲಿ ಜೀವ ರಕ್ಷಕ ದ್ರಾವಣವೊಂದು ತುಂಬಿಕೊಂಡಿರುತ್ತದೆ. ಅದರೊಳಗೆ ಮಸ್ಲಿನ್ ಬಟ್ಟೆಯಂತಹ ತೆಳುವಾದ ತೇಲಾಡುವ ಚೀಲದ ರಚನೆ. ಪ್ರಣಾಳದಲ್ಲಿ ಬೆಳೆಸಿದ ಭ್ರೂಣವನ್ನು ನಿಗದಿತ ಅವಧಿಯಲ್ಲಿ ಈ ಚೀಲಕ್ಕೆ ವರ್ಗಾವಣೆ ಮಾಡಿದರೆ ವೈದ್ಯರ ಒಂದು ಹಂತದ ಕರ್ತವ್ಯ ಮುಗಿದಂತೆ. ಪತಿ–ಪತ್ನಿ ಬಯಸಿದಲ್ಲಿ ಗಾಜಿನ ಪೆಟ್ಟಿಗೆಯನ್ನು ಮನೆಗೆ ಕೊಂಡೊಯ್ಯಬಹುದಾಗಿತ್ತು. ಆದರೆ ಶುಚಿತ್ವವಿಲ್ಲದ, ಅನಾರೋಗ್ಯಕರ ವಾತಾವರಣವಿದ್ದಲ್ಲಿ ವೈದ್ಯರು ತಮ್ಮ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿಯೇ ಬಾಕ್ಸ್ ಬೇಬಿಯನ್ನಿಟ್ಟುಕೊಂಡು ದಿನ ತುಂಬುವವರೆಗೂ ಅದರ ನಿಗಾವಹಿಸುತ್ತಿದ್ದರು. ದಿನಕ್ಕೆ ಎರಡು ಬಾರಿ ವೈದ್ಯರು ನೀಡಿದ ದ್ರಾವಣವನ್ನು ಬಾಕ್ಸ್‌ಗೆ ಜೋಡಿಸಲಾಗಿದ್ದ ನಳಿಕೆಗೆ ಇಂಜೆಕ್ಟ್ ಮಾಡಿದರೆ ಸಾಕಿತ್ತು. ಒಂಭತ್ತು ತಿಂಗಳು ಪೂರ್ಣಗೊಂಡಾಗ ತರಬೇತಿ ಹೊಂದಿದ ಆಸ್ಪತ್ರೆಯ ಸಿಬ್ಬಂದಿಗಳು ಬಾಕ್ಸ್‌ನಿಂದ ಮಗುವನ್ನು ಹೊರತೆಗೆದು ಮಗು ಸಹಜ ವಾತಾವರಣಕ್ಕೆ ಹೊಂದಿಕೊಳ್ಳುವಂತೆ ಮಾಡುತ್ತಿದ್ದರು. ಅಲ್ಲಿಂದ ಆ ಮಗು ಸಾಮಾನ್ಯ ಜೀವನಕ್ಕೆ ತನ್ನನ್ನು ತಾನು ತೆರೆದುಕೊಳ್ಳುತ್ತಿತ್ತು.

ಮರುದಿನ ಮಹಾನಗರದ ಕೆಲ ಆಯಕಟ್ಟಿನ ಸ್ಥಳಗಳಲ್ಲಿ ಬಾಕ್ಸ್ ಬೇಬಿ ಪದ್ಧತಿಯನ್ನು ಖಂಡಿಸಿ ಮೆರವಣಿಗೆಗಳು ನಡೆದವು. ರಕ್ಷಣಾ ವೇದಿಕೆಯವರು, ಕೆಲ ಮಾನವತಾವಾದಿ ಸಂಘಟನೆಗಳವರು ಡಾಕ್ಟರ್ ಅಗರ್‌ವಾಲ್ ವಿರುದ್ಧ ಘೋಷಣೆಗಳನ್ನು ಕೂಗಿದರು. ಮಕ್ಕಳ ಹಕ್ಕಿಗಾಗಿ ಹೋರಾಡುವ ಸಂಸ್ಥೆಗಳು ಅಗರ್‌ವಾಲರ ಪ್ರತಿಕೃತಿಗಳನ್ನು ದಹಿಸಿದರು. ಬುದ್ಧಿಜೀವಿಗಳು, ಸಾಹಿತಿಗಳು, ಹಿರಿಯ ತಲೆಗಳು ಈ ಸಂಶೋಧನೆಯ ವಿರುದ್ಧ ಪತ್ರಿಕೆಗಳಲ್ಲಿ ಹರಿಹಾಯ್ದರೆ, ಬಿಸಿ ರಕ್ತದವರು ಪರವಾಗಿ ಬರೆದರು. ಶಾಲಾ ಕಾಲೇಜುಗಳ ಚರ್ಚಾ ಸ್ಪರ್ಧೆಗಳಲ್ಲಿ ಬಾಕ್ಸ್ ಬೇಬಿ ಪದ್ಧತಿ ಹೊಸ ವಿಷಯವಾಗಿ ಸ್ಥಾನ ಪಡೆದುಕೊಂಡು ಕಾಲ್ಚೆಂಡಿನಂತೆ ಪರ ಹಾಗೂ ವಿರೋಧಗಳ ಮಧ್ಯದಲ್ಲಿ ಸಿಲುಕಿ ಒದ್ದಾಡತೊಡಗಿತು. ಸದಾ ಹೊಸತರ ಹಿಂದೆ ಬೆಂಬೀಳುವ ಟಿ.ವಿ. ಮಾಧ್ಯಮದವರು ಡಾಕ್ಟರ್ ಅಗರ್‌ವಾಲ್ ದಂಪತಿಗಳ ಡೇಟ್ಸ್‌ಗಳಿಗಾಗಿ ನಾ ಮುಂದೆ ತಾ ಮುಂದೆ ಎನ್ನತೊಡಗಿದರು. ಈ ಗಲಾಟೆಯ ಮಧ್ಯದಲ್ಲಿ ಹೆಸರಾಂತ ಸ್ತ್ರೀರೋಗ ಹಾಗೂ ಪ್ರಸೂತಿ ತಜ್ಞರು ಸದ್ದಿಲ್ಲದಂತೆ ವಿದೇಶಕ್ಕೆ ಹಾರತೊಡಗಿದರು. ಇಷ್ಟು ದಿನಗಳ ಕಾಲ ಕೇವಲ ಎಂ.ಟಿ.ಪಿ.ಯನ್ನೇ ನೆಚ್ಚಿಕೊಂಡು ನೊಣ ಹೊಡೆಯುತ್ತಿದ್ದ ಸಣ್ಣ ಪುಟ್ಟ ಪ್ರಸೂತಿ ಗೃಹಗಳು ಬಸುರಿಯರಿಂದ ಕಿಕ್ಕಿರಿಯತೊಡಗಿದವು. ಇಂಥಹ ವೈದ್ಯರುಗಳೆಲ್ಲ ಡಾಕ್ಟರ್ ಅಗರ್‌ವಾಲ್‌ರಿಗೆ ಮನದಲ್ಲೇ ಕೃತಜ್ಞತೆಗಳನ್ನು ಸಲ್ಲಿಸತೊಡಗಿದರು. ದಿನ ನಿತ್ಯವೂ ಬಾಕ್ಸ್ ಬೇಬಿ ಪದ್ಧತಿಗಾಗಿ ನೂರಾರು ದಂಪತಿಗಳು ಅಗರ್‌ವಾಲ್ ಆಸ್ಪತ್ರೆಯಲ್ಲಿ ನೋಂದಣಿಯನ್ನು ಮಾಡಲಾರಂಭಿಸಿದರು. ಹೀಗಾಗಿ ಈ ಬಾಕ್ಸ್‌ಗಳ ಕೊರತೆಯುಂಟಾಗಲಾರಂಭಿಸಿತು. ವಿದೇಶದಲ್ಲಿ ತಯಾರಾಗುವ ಈ ವೈಜ್ಞಾನಿಕ ಬಾಕ್ಸ್‌ಗಳಿಗಾಗಿ ಡಾಕ್ಟರ್ ಅಗರ್‌ವಾಲ್‌ರವರು ಹೆಚ್ಚಿನ ಸಂಖ್ಯೆಯಲ್ಲಿ ಬೇಡಿಕೆಯನ್ನು ಸಲ್ಲಿಸಿದ್ದಾರೆಂದು ಮಹಾನಗರದ ಜನರು ಮಾತನಾಡಹತ್ತಿದರು. ಅಲ್ಲದೆ ಜನರು ಕೊಡುವ ದುಡ್ಡನ್ನಾಧರಿಸಿ ಬಾಕ್ಸ್ ಬೇಬಿ ಲಭ್ಯವಾಗುತ್ತಿವೆಯೆಂದೂ ಊಹಾಪೋಹಗಳು ಹರಿದಾಡತೊಡಗಿದವು. ಇದಕ್ಕೆ ಸಾಕ್ಷಿಯೆಂಬಂತೆ ಬಾಕ್ಸ್‌ಗಳು ಹೆಸರಾಂತ ನಟ–ನಟಿಯರು, ರಾಜಕಾರಣಿಗಳು, ವ್ಯವಹಾರಸ್ಥರ ಪಾಲಾಗುತ್ತಿವೆ ಎಂದು ಮಾಧ್ಯಮದವರು ಭಿತ್ತರಿಸತೊಡಗಿದರು.

ಫಲಾನುಭವಿ ದಂಪತಿಗಳೆಲ್ಲ ಡಾಕ್ಟರ್ ಅಗರ್‌ವಾಲ್ ದಂಪತಿಗಳನ್ನು ಕೊಂಡಾಡುವವರೇ. ಒಂಭತ್ತು ತಿಂಗಳುಗಳ ಕಾಲ ಗರ್ಭದಲ್ಲಿ ಮಗುವನ್ನು ಇಟ್ಟುಕೊಳ್ಳುವುದೆಂದರೆ ಸಾಮಾನ್ಯವೆ? ವಾಂತಿ ಓಕರಿಕೆಗಳಿಂದ ಆರಂಭವಾಗಿ ಮಗು ಈ ಜಗತ್ತಿಗೆ ಬರುವವರೆಗೂ ಅದೆಷ್ಟೊಂದು ತಾಪತ್ರಯಗಳು? ಇಲ್ಲಿ ತಮ್ಮ ಮುದ್ದು ಕಂದನ ಬೆಳವಣಿಗೆಯನ್ನು ದಿನ ನಿತ್ಯ ಕಣ್ಣಾರೆ ಕಾಣಬಹುದು. ದುಡಿದು ದಣಿದು ಬಂದ ದಂಪತಿಗಳು ಗಾಜಿನ ಪೆಟ್ಟಿಗೆಯಲ್ಲಿ ತೇಲಾಡುವ ತಮ್ಮ ಕರುಳ ಕುಡಿಗಳನ್ನು ಮನದಣಿಯೇ ನೋಡಿ ತಮ್ಮ ಆಯಾಸವನ್ನು ಮರೆಯತೊಡಗಿದರು. ದಿನ ದಿನಕ್ಕೂ ಆರೋಗ್ಯದಿಂದೊಡಗೂಡಿ ಬೆಳೆಯುತ್ತಿರುವ ತಮ್ಮ ಮಗು ಗಂಡೋ ಹೆಣ್ಣೊ ಎಂದು ಕುತೂಹಲಕ್ಕೊಳಗಾಗತೊಡಗಿದರು. ತಮಗೆ ಬೇಕಾದ ಮಗುವನ್ನೇ ಡಾಕ್ಟರ್ ಅಗರ್‌ವಾಲ್ ಅವರು ಸೃಷ್ಠಿ ಮಾಡುವಂತಿದ್ದರೆ? ಒಂದಿಲ್ಲ ಒಂದು ದಿನ ವೈದ್ಯಕೀಯ ಕ್ಷೇತ್ರ ಅದನ್ನೂ ಸಾಧಿಸುವುದರಲ್ಲಿ ಸಫಲವಾದೀತೆಂದು ಮಹಾನಗರದ ಜನರು ಕನಸು ಕಾಣತೊಡಗಿದರು.

ಬಾಕ್ಸ್ ಬೇಬಿಯ ಪರಿಕಲ್ಪನೆ ಮಹಾನಗರದ ಜನರ ಭಾವನೆಗಳಿಗೂ ಲಗ್ಗೆ ಇಟ್ಟಿತು. ದೂರವಾದ ಮನಸುಗಳು ಹತ್ತಿರವಾಗತೊಡಗಿದರೆ, ಹತ್ತಿರವಿದ್ದ ಮನಸುಗಳು ದೂರವಾಗತೊಡಗಿದವು. ಪುಟ್ಟ ಅತಿಥಿಯೊಂದು ತಮ್ಮ ಮನೆಯಲ್ಲಿ ಹಂತ ಹಂತವಾಗಿ ಬೆಳೆಯುವುದನ್ನೇ ಕಾಣುತ್ತ ಗಂಡ ಹೆಂಡರು ತಮ್ಮ ಮಧ್ಯದ ವಿರಸವನ್ನು ಮರೆಯತೊಡಗಿದರು. ಬಯಕೆ ಬಸಿರುಗಳಿಲ್ಲದೇ ಕೈಗೆ ಬಂದು ಬೀಳುವ ಮಗು ಹೇಗೆ ತಾನೇ ಸಂತಸವನ್ನು ತಂದೀತು? ತನ್ನ ತಾಯಿಯ ಬೆಚ್ಚನೆಯ ಗರ್ಭದ ಗೂಡಿನಲ್ಲಿ ತೇಲುತ್ತ, ಆಕೆಯ ನೋವು–ನಲಿವು ಅಳು–ನಗುವಿನ ಸಂವೇದನೆಗಳೊಂದಿಗೆ ಬೆರೆತು ಬೆಳೆಯಬೇಕಾದ ಮಗು ನಾಲ್ಕು ಗೋಡೆಗಳ ಮಧ್ಯದಲ್ಲಿಟ್ಟ ಗಾಜಿನ ಪೆಟ್ಟಿಗೆಯ ದ್ರಾವಣದಲ್ಲಿ ಅನಾಥ ಶವದಂತೆ ತೇಲಾಡುವ ದೃಶ್ಯವನ್ನು ನೋಡಲಾರದೆ ಹಿರಿಯ ಜೀವಗಳು ನೊಂದು ನಿಟ್ಟುಸಿರಿಡತೊಡಗಿದವು. ಬಸುರಿ ಬಯಕೆಯನ್ನು ತೀರಿಸುವ ಅವಕಾಶವನ್ನೂ ತಮ್ಮ ಹೆಣ್ಣು ಮಕ್ಕಳು ತಮ್ಮಿಂದ ಕಿತ್ತುಕೊಂಡರಲ್ಲ ಎಂದು ಹೆತ್ತವರು ಕಣ್ಣೀರು ಹಾಕತೊಡಗಿದರು. ಎಳೆಯ ಕಂದನ ಮಿಸುಕಾಟ, ಒದೆತಗಳ ರೋಮಾಂಚನವನ್ನು ಅನುಭವಿಸದೇ ತಾಯಂದಿರಾಗುತ್ತಿರುವ ತಮ್ಮ ಮಕ್ಕಳು, ಸೊಸೆಯಂದಿರು ಹೆತ್ತಮ್ಮನಾಗಲು ಹೇಗೆ ಸಾಧ್ಯವೆಂದು ಮರುಕ ಪಡತೊಡಗಿದರು. ಚೊಚ್ಚಲ ಬಸುರಿಗೆ ಸೀಮಂತ ಮಾಡಿ ಸಂಭ್ರಮಪಡಬೇಕೆಂದಿದ್ದ ಅಮ್ಮಂದಿರು ಡಾಕ್ಟರ್ ಅಗರ್‌ವಾಲ್ ದಂಪತಿಗಳ ಸಂಶೋಧನೆಗೆ ಹಿಡಿ ಶಾಪ ಹಾಕತೊಡಗಿದರು. ತಾಯಿ ಮಗುವಿನ ಮಧ್ಯ ಬೆಸೆದುಕೊಂಡಿರುವ ಹೊಕ್ಕಳ ಬಳ್ಳಿ ಆಕೆ ಸೇವಿಸುವ ಆಹಾರವನ್ನು ಮಗುವಿಗೆ ತಲುಪಿಸುತ್ತದೆ. ಆದರೆ ಆಕ್ವೇರಿಯಂನಲ್ಲಿನ ಮೀನಿಗೆ ಆಹಾರ ನೀಡುವಂತೆ ಗಾಜಿನ ಪೆಟ್ಟಿಗೆಯಲ್ಲಿನ ಮಗುವಿಗೆ ನಾಲ್ಕು ಹನಿಗಳ ದ್ರಾವಣವನ್ನು ಉಣಿಸುವುದೆಂದರೆ? ಇಂಥ ಮಗು ನಾಳೆ ಎಡವಿ ಬಿದ್ದಾಗ ನೋವಿನಿಂದ "ಅಮ್ಮಾ" ಎನ್ನುವುದಾಗಲಿ, ನೆಲಕ್ಕೆ ಬಿದ್ದ ಮಗುವಿನ ನೋವು ತಾಯ ಕರುಳನ್ನು ಹಿಂಡುವುದಾಗಲಿ ಅನುಮಾನ ಎಂದುಕೊಳ್ಳುತ್ತ ಹಿರಿಯ ಜೀವಗಳು ಅನ್ನಲಾರದೆ ಆಡಲಾರದೆ ಮೌನವಾಗಿ ರೋಧಿಸಲಾರಂಭಿಸಿದವು.

ದೇಶದ ಮೊಟ್ಟ ಮೊದಲ ಬಾಕ್ಸ್ ಬೇಬಿ ಅತ್ಯಂತ ಯಶಸ್ವಿಯಾಗಿ ಬೆಳೆದು ಬಾಕ್ಸ್‌ನಿಂದ ಮುಕ್ತಿ ಪಡೆದಿತ್ತು. ಡಾಕ್ಟರ್ ಅಗರ್‌ವಾಲ್ ದಂಪತಿಗಳು ತಮ್ಮ ಕೈಯ್ಯಾರೆ ಮಗುವನ್ನು ಅದರ ತಂದೆ–ತಾಯಿಗೆ ಹಸ್ತಾಂತರಿಸಿ ಅಭಿನಂದಿಸಿದ್ದರು. ಪತ್ರಿಕೆಯವರು ಕವರ್ ಪೇಜ್ ಸ್ಟೋರಿಯಾಗಿ ಇದನ್ನು ಪ್ರಕಟಿಸಿದ್ದರು. ಟಿ.ವಿ.ಯವರು ಮತ್ತೊಮ್ಮೆ ಡಾಕ್ಟರ್ ಅಗರ್‌ವಾಲ್ ಅವರನ್ನು ಹಾಗೂ ಮಗುವಿನ ತಂದೆ ತಾಯಿಯನ್ನು ಸ್ಟುಡಿಯೋಗೆ ಕರೆಸಿಕೊಂಡು ಕಾರ್ಯಕ್ರಮವನ್ನು ನೇರ ಪ್ರಸಾರ ಮಾಡಿ ತಮ್ಮ ಟಿ.ಆರ್.ಪಿ.ಯನ್ನು ಹೆಚ್ಚಿಸಿಕೊಂಡರು. ಸಹಜವಾಗಿ ಜನಿಸಿದ ಮಕ್ಕಳಿಗಿಂತ ಬಾಕ್ಸ್ ಬೇಬಿಗಳು ನಾಲ್ಕು ಪಟ್ಟು ಹೆಚ್ಚು ಚಟುವಟಿಕೆಯಿಂದ ಇರುತ್ತಾರೆಂದೂ ಅವರ ಐಕ್ಯೂ ಕೂಡ ಉಳಿದ ಮಕ್ಕಳಿಗಿಂತ ಮೇಲ್ಮಟ್ಟದಲ್ಲಿರುತ್ತದೆ ಎಂದು ಡಾಕ್ಟರ್ ಅಗರ್‌ವಾಲ್ ಅಭಿಪ್ರಾಯವನ್ನು ಹಂಚಿಕೊಂಡಿದ್ದರು.

ಹೆಣ್ಣು ತಾಯಿಯಾಗುವುದು ಮಗುವನ್ನು ಹೆತ್ತಾಗ. ಆದರೆ ಪರಿಪೂರ್ಣಳಾಗುವುದು ತನ್ನ ಎದೆಯ ಅಮೃತವನ್ನು ತನ್ನ ಕರುಳ ಕುಡಿಗೆ ಉಣ್ಣಿಸಿದಾಗ. ಎದೆ ಬತ್ತಿ ಹಾಲು ಬೀಳದಿದ್ದಾಗ ಹಸಿವಿನಿಂದ ರೋಧಿಸುವ ಕಂದನನ್ನು ಕಂಡು ಆಕೆಯ ಕರುಳು ಕಿವುಚಿದಂತಾಗುತ್ತದೆ. ತಾಯಿಯಾದರೂ ತಾನು ಅಮ್ಮನಾಗದ ದುರಾದೃಷ್ಟಕ್ಕೆ ತನ್ನನ್ನು ತಾನು ಹಳಿದುಕೊಳ್ಳುತ್ತಾಳೆ. ಆದರೆ ಬಾಕ್ಸ್ ಬೇಬಿ ಅಮ್ಮಂದಿರು ತಮ್ಮ ಬಗ್ಗೆ ಹೆಮ್ಮೆ ಪಟ್ಟುಕೊಳ್ಳತೊಡಗಿದರು. ಇಷ್ಟು ವರ್ಷದಿಂದ ಕಾಪಾಡಿಕೊಂಡು ಬಂದ ತಮ್ಮ ಅಂಗ ಸೌಷ್ಟವ,

ದೇಹಸಿರಿಯನ್ನು ಹಾಗೆಯೇ ಉಳಿಸಿಕೊಂಡಿರುವವೆಲ್ಲ ಎಂದು. ಬಳುಕುವ ಬಳ್ಳಿಯಂತೆ ಇದ್ದ ತಮ್ಮ ಸ್ನೇಹಿತೆಯರು ಮೊದಲ ಹೆರಿಗೆಯಾದೊಡನೆ ಗೋದಿಯ ಮೂಟೆಯಂತಾಗಿ ಹೋಗಿದ್ದಾರೆ. ಎದೆಗಳೋ ಜೋಲು ಬಿದ್ದು ಹೊಟ್ಟೆಯನ್ನು ತಾಕುತ್ತಿವೆ. ಒಂದು ಬಾರಿ ದೇಹದ ಫಿಗರ್ ಹಾಳಾದರೆ ಮೊದಲಿನ ಸ್ಥಿತಿಗೆ ತರಬೇಕಾದಲ್ಲಿ ಜೀವನವಿಡೀ ಒದ್ದಾಡಬೇಕಾಗುತ್ತದೆ ಎಂದುಕೊಳ್ಳುತ್ತ ತಮ್ಮ ಜಾಣತನಕ್ಕೆ ತಮ್ಮ ಬೆನ್ನನ್ನು ತಟ್ಟಿಕೊಳ್ಳತೊಡಗಿದರು. ಸೌಂದರ್ಯ ಪ್ರಜ್ಞೆಯುಳ್ಳವರು, ನಟೀಮಣಿಯರೆಲ್ಲ ಬಾಕ್ಸ್ ಬೇಬಿ ಪದ್ಧತಿಯಿಂದ ನಿರಾಳವಾಗತೊಡಗಿದರು. ನಲವತ್ತರವರೆಗೂ ಮಕ್ಕಳ ಬಗ್ಗೆ ಚಿಂತಿಸಬೇಕಾದ ಪ್ರಮೇಯವೇ ಇಲ್ಲವೆಂದು ತಮಗೆ ಬೇಕಾದವರಿಗೆ ಸಲಹೆ ಕೊಡಲಾರಂಭಿಸಿದರು.

ಡಾಕ್ಟರ್ ಅಗರ್‌ವಾಲ್ ಅವರಿಗೆ ದೇಶದ ಅತ್ಯುನ್ನತ ಪ್ರಶಸ್ತಿಯನ್ನು ಕೊಟ್ಟು ಗೌರವಿಸಲಾಗಿ, ಅದಕ್ಕೆ ಆಭಾರಿಯಾಗಿ ಅವರು ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತ, ಬಾಕ್ಸ್ ಬೇಬಿ ಪದ್ಧತಿಯ ಮೂಲಕ ಮಗುವನ್ನು ಪಡೆದುಕೊಂಡ ನೂರಾರು ದಂಪತಿಗಳಿಂದು ಸಂತಸದ, ನೆಮ್ಮದಿಯುತ ಜೀವನವನ್ನು ನಡೆಸುತ್ತಿದ್ದಾರೆ. ಈ ಪದ್ಧತಿಯಿಂದ ಹೆಚ್ಚು ಹೆಚ್ಚು ಮಹಿಳೆಯರು ಸ್ವಾವಲಂಬಿಗಳಾಗುವ ನಿಟ್ಟಿನಲ್ಲಿ ಸಾಗಿ ತಾವೂ ಕೂಡ ಪುರುಷರ ಸರಿಸಮನಾಗಿ ಕೆಲಸ ಮಾಡಲು ಆರಂಭಿಸಿದ್ದಾರೆ. ನಗರಗಳ ಗಡಿಯನ್ನು ದಾಟಿ ಹಳ್ಳಿ ಹಳ್ಳಿಗೂ ಈ ಪದ್ಧತಿ ತಲುಪಬೇಕಾದ ಅವಶ್ಯಕತೆ ಇದೆ. ಅಂದಾಗ ಮಾತ್ರ ಹೆರುವ ಯಂತ್ರಗಳಾಗಿರುವ ಗ್ರಾಮೀಣ ಹೆಣ್ಣು ಮಕ್ಕಳು ಕೂಡ ಶೋಷಣೆಯಿಂದ ಮುಕ್ತರಾಗಬಹುದು. ಈ ಕುರಿತಾಗಿ ಸರ್ಕಾರ ಹಾಗೂ ಆರೋಗ್ಯ ಸಚಿವರು ಆಂದೋಲನದ ಸ್ವರೂಪದಲ್ಲಿ ಬಾಕ್ಸ್ ಬೇಬಿ ಪದ್ಧತಿಯ ಪ್ರಚಾರ ಕಾರ್ಯ ನಡೆಸಲು ಮುಂದಾಗಬೇಕೆಂದು ಅಗರ್‌ವಾಲ್ ಅವರು ಭಿನ್ನವಿಸಿಕೊಂಡರು. ನಮ್ಮ ಸಂಶೋಧನೆ ನಿರಂತರ ಕ್ರಿಯಾಶೀಲತೆಯಿಂದ ಕೂಡಿದ್ದು, ಇನ್ನೂ ಹಲವಾರು ಕ್ರಾಂತಿಕಾರಕ ಹಾಗೂ ಜನರಿಗೆ ಅನುಕೂಲವಾಗುವಂತಹ ಸಂಶೋಧನೆಗಳಲ್ಲಿ ತೊಡಗಿದ್ದೇವೆ.

ಇತ್ತೀಚಿನ ದಿನಗಳಲ್ಲಿ ಹೆತ್ತವರನ್ನು, ಹಿರಿಯ ಜೀವಗಳನ್ನು ನೋಡಿಕೊಳ್ಳುವ ವೃದ್ಧಾಶ್ರಮಗಳು ನಾಯಿ ಕೊಡೆಗಳಂತೆ ಹುಟ್ಟಿಕೊಳ್ಳುತ್ತಿವೆ. ಇದಕ್ಕೆ ಕಾರಣ, ವಯಸ್ಸಾದವರನ್ನು ನೋಡಿಕೊಳ್ಳಲಾಗದ ಸಮಯದ ಕೊರತೆ. ಮಕ್ಕಳು ವಿದೇಶದಲ್ಲಿರುವ ಕಾರಣದಿಂದಲೋ, ಮಗ–ಸೊಸೆ ಇಬ್ಬರೂ ದುಡಿಯುವ ಅನಿವಾರ್ಯತೆ ಇರುವುದರಿಂದಲೋ ಹಿರಿಯರು ಕಡೆಗಣಿಸಲ್ಪಡುತ್ತಿದ್ದಾರೆ. ಈ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುವಲ್ಲಿ ನಮ್ಮ ಹೊಸ ಸಂಶೋಧನೆ ನಮಗೆ ತುಂಬಾ ಹತ್ತಿರದಲ್ಲಿದೆ. ಓಡಾಡಲು ಅಸಮರ್ಥರಾದ, ಹಾಸಿಗೆಯನ್ನು ಹಿಡಿದ ಹಿರಿಯ ಜೀವಗಳನ್ನು ಮನೆಯಲ್ಲಿಯೇ ಇಟ್ಟುಕೊಂಡು ನೋಡಿಕೊಳ್ಳಬಹುದಾದ ಬಾಕ್ಸ್ ಕೇರಿಂಗ್ ಪದ್ಧತಿಯನ್ನು ಸಂಶೋಧಿಸಲಾಗಿದೆ. ಆರು ಅಡಿ ಉದ್ದ, ಮೂರು ಅಡಿ ಅಗಲದ ಈ ಪೆಟ್ಟಿಗೆ ಹೊಸದೊಂದು ಮನ್ವಂತರವನ್ನು ತರಲಿದೆ. ವಯಸ್ಸಾದವರನ್ನು ಇದರಲ್ಲಿ ಮಲಗಿಸಿ, ಬಾಕ್ಸ್ ಬೇಬಿಗೆ ಆಹಾರವನ್ನು ನೀಡುವ ಕ್ರಮದಲ್ಲಿಯೇ ಇವರಿಗೂ ದ್ರಾವಣದ ರೂಪದಲ್ಲಿ ಆಹಾರವನ್ನು ಇಂಜೆಕ್ಟ್ ಮಾಡಬಹುದಾಗಿದೆ. ಶುಚಿತ್ವದ ಸಂಪೂರ್ಣ ವ್ಯವಸ್ಥೆಯನ್ನು ಈ ಕೇರಿಂಗ್ ಬಾಕ್ಸ್ ಸ್ವತ: ತಾನೇ ಮಾಡುವ ವ್ಯವಸ್ಥೆಯನ್ನು ಮಾಡಲಾಗಿದೆ. ಹೀಗಾಗಿ ವೃದ್ಧರನ್ನು ಶುಚಿಗೊಳಿಸುವ ಯಾವುದೇ ಸಮಸ್ಯೆ ಇಲ್ಲ. ಹೆತ್ತವರನ್ನು ನಮ್ಮ ಕಣ್ಮುಂದೆಯೇ ಇಟ್ಟುಕೊಂಡಂತಾಗುವುದಲ್ಲದೇ ಅವರನ್ನು ವೃದ್ಧಾಶ್ರಮಕ್ಕೆ ತಳ್ಳಿ ಪಾಪ ಪ್ರಜ್ಞೆಯಲ್ಲಿ ತೊಳಲಾಡುವ ಅಗತ್ಯವೂ ಇಲ್ಲ. ಹೀಗೆ ಡಾಕ್ಟರ್ ಅಗರ್‌ವಾಲ್ ಅವರು ತಮ್ಮ ಹೊಸ ಸಂಶೋಧನೆಯ ಕುರಿತು ಹೆಮ್ಮೆಯಿಂದ ಹೇಳುತ್ತಿದ್ದಂತೆಯೇ ಕಿವಿಗಡಚಿಕ್ಕುವ ಚಪ್ಪಾಳೆಗಳ ಸದ್ದು ಕೇಳಿ ಬರತೊಡಗಿತು. ಅತ್ತ ಅಗರ್‌ವಾಲ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಸ್ಥಿರ ದೂರವಾಣಿಗೆ ಬಿಡುವಿಲ್ಲದಂತೆ ಒಂದರ ಮೇಲೊಂದು ಕರೆಗಳು ಬರತೊಡಗಿದವು. ಹಲೋ! ಕೇರಿಂಗ್ ಬಾಕ್ಸ್ ಬುಕ್ ಮಾಡಬೇಕಿತ್ತು..............!

●

**ನೇಸರು ಜಾಗತಿಕ ಮಾಸ್ತಿ ಸ್ಮರಣಾರ್ಥ ಸಣ್ಣ ಕತೆ ಸ್ಪರ್ಧೆಗೆ ಬಂದ ಕಥೆ**

# ಕೃಷ್ಣ ಪುಷ್ಪಗಳು !

✍ ಚಿತ್ರಾ ರಾಮಚಂದ್ರನ್

ತಿರುಗಿದೆಡೆಯೆಲ್ಲ ಕೃಷ್ಣ ಪುಷ್ಪಗಳು !
ನಾರಾಯಣನ ಮುಡಿಯ ನವಿಲುಗರಿಯಲ್ಲೂ -
ವಿಷ ಕಂಠನ ಕೊರಳ ಕಾಂತಿಯಲ್ಲೂ ಮಿಂದಂತೆ -
ನೇರಳೆ ನೀಲಿ ಮಣಿಗಳು ಪಸರಿಸಿದಂತೆ -
ಎಲೆಲ್ಲೂ ಥಳ ಥಳಿಸುತ್ತಿದ್ದ ಕೃಷ್ಣ ಪುಷ್ಪಗಳು !
ಕಾಡು ಹಾದಿಯಲ್ಲಿ ನಡೆಯುವವರ ಪಾದ ಪೂಜೆ ಮಾಡುತ್ತ -
ಗಿರಿ ಪಂಕ್ತಿ ಶಿಖರಗಳನ್ನು ನೀಲಿ ಕಂಬಳಿಯಾಗಿ ಹೊದಿಸುತ್ತ -
ನೋಡ ನೋಡಿದೆಡೆಯೆಲ್ಲ ದಟ್ಟವಾಗಿ ಆವರಿಸಿದ್ದ ಕೃಷ್ಣ ಪುಷ್ಪಗಳು !

ಆ ಘಟ್ಟ ಪ್ರದೇಶದ ಸೌಂದರ್ಯ ಸಿರಿ ಕಂಡು ಬೆಕ್ಕಸ ಬೆರಗಾಗಿ, ಆ ಲಾವಣ್ಯಮಯ ನೀಲಿಯಲ್ಲಿ ಲಯವಾಗಿ ಶಿಲೆಯಂತೆ ನಿಂತುಬಿಟ್ಟಿದ್ದ ವಿಜಯವಿಕ್ರಮ. ಹೊತ್ತು ಕಳೆದಂತೆ ಮಿಣಿ ಮಿಣಿ ಹೊಳೆವ ಎರಡು ತೀಕ್ಷ್ಣವಾದ ಕಣ್ಣುಗಳು ಮಿಂಚು ಹುಳುಗಳಂತೆ ತನ್ನನ್ನು ಮುತ್ತುತ್ತಿರುವಂತೆ ಭಾಸವಾಗಿ ಥಟ್ಟೆಂದು ಆ ಏಕಾಗ್ರತೆಯಿಂದ ಎಚ್ಚೆತ್ತು ತಿರುಗಿದ. ಉಸಿರು ಕಟ್ಟುವಂತಹ ಆ ನೀಲಿ ಕಾಮಾಲೆಯಿಂದ ಹೊರಬರಲು ಯತ್ನಿಸುವವನಂತೆ ತನ್ನ ತಲೆಯನ್ನು ಒಮ್ಮೆ ಕಲುಕಿ ಕೊಡವಿಕೊಂಡ. ತನ್ನನ್ನೇ ವೀಕ್ಷಿಸುತ್ತಿದ್ದ ಹೊಳೆವ ಕಣ್ಣುಗಳ ಒಡೆಯ ಅನಿರುದ್ಧನದ್ದಲ್ಲದೆ ಈ ಕಗ್ಗಾಡಲ್ಲಿ ಇನ್ಯಾರದ್ದಾಗಿರಲು ಸಾಧ್ಯ?

"ಯಾಕೆ ಹಾಗೆ ನಿಟ್ಟಿಸಿ ನೋಡುತಿರುವೆ ಗೆಳೆಯ?" ಮರದ ಬೊಡ್ಡೆಗೆ ಒರಗಿ ಕುಳಿತಿದ್ದ ತನ್ನ ಆಪ್ತ ಸ್ನೇಹಿತನನ್ನು ಕುರಿತು ಹೆಜ್ಜೆ ಹಾಕುತ್ತಲೇ ಪ್ರಶ್ನಿಸಿದ ವಿಜಯವಿಕ್ರಮ.

ಪ್ರಕೃತಿಯ ಸೌಂದರ್ಯದಲಿ ಮುಳುಗಿ ಹೋದರೆ ಜಗವನ್ನೇ ಮರೆತು ಮಗುವಾಗಿಬಿಡುವ ನಿನ್ನ ಪ್ರಕೃತಿ ಪ್ರೇಮದ ಪರಿಯ ಕಂಡ ವಿಸ್ಮಯ!" ನಾಟಕೀಯವಾದ ಅನಿರುದ್ಧನ ನುಡಿ ಕೇಳಿ ಮುಗುಳು ನಗೆ ಬೀರಿದ ವಿಜಯ.

"ಘಟ್ಟದ ಮೇಲೊಂದು ನೀಲಿ ಕಡಲವನ್ನು ತೋರುವುದಾಗಿ ಕೇಳಿ ನೀನೇ ಅಲ್ಲವೇ ನನ್ನನ್ನು ಇಲ್ಲಿಗೆ ಕರೆ ತಂದದ್ದು? ಇಂತಹ ಅದ್ಭುತ ಸೌಯಂರ್ದವನ್ನು ತೋರಿಸಿಕೊಟ್ಟದ್ದು ! ನಿಜಕ್ಕೂ ಈ ಕೃಷ್ಣ ಪುಷ್ಪಗಳು ಆದೆಷ್ಟು ಸುಂದರ ! ಅದೆಷ್ಟು ಕೋಮಲ!" ಬೆರಗಿನಿಂದ ನುಡಿಯುತ್ತ ಗೆಳೆಯನ ಬಲಿ ಬಂದು ತಾನೂ ಆ ಹೆಮ್ಮರದ ಬೊಡ್ಡೆಗೆ ಒರಗಿ ಕುಳಿತ ಆ ವೀರ.

"ಹೂಮ್! ಕೋಮಲ! ರುದ್ರ ಕೋಮಲ!" ಪಿಸುಗುಟ್ಟಿದ ಅನಿರುದ್ಧ.

"ರುದ್ರ ಕೋಮಲ?" ಗೆಳೆಯನ ಮಾತನ್ನು ಕೇಳಿ ಆಶ್ಚರ್ಯದಿಂದ ಹುಬ್ಬೇರಿಸಿದ ವಿಜಯ.

"ಅಹುದು ಗೆಳೆಯ ! ಈ ಹೂವುಗಳು ನೋಡಲು ಆದೆಷ್ಟು ಸುಂದರವೋ ಅಷ್ಟೇ ಅಪಾಯಕಾರಿ! ಹಂತಕ ಸಸ್ಯಗಳಲ್ಲಿ ಅರಳಿರುವ ಮಾಂಸಾಹಾರಿ ಹೂವುಗಳು ಇವು !"

ಹೂವಿಗೂ ಮಾಂಸಾಹಾರಕ್ಕೂ ಅದ್ಯಾವೂರ ಸಂಬಂಧ? ಅರ್ಥವಾಗಲಿಲ್ಲ ! ಗೆಳೆಯನ ಪೇಚಾಟ ಕಂಡು ಕಿರು ನಗೆ ಬೀರಿದ ಅನಿರುದ್ಧ ನಿಧಾನವಾಗಿ ವಿವರಿಸಲು ತೊಡಗಿದ.

"ಹೂವಿನ ಸೌಂದರ್ಯಕ್ಕೆ ಮರುಳಾಗಿ ಅದರ ಜೇನನ್ನು ಬಯಸಿ ಸನಿಹಕ್ಕೆ ಬರುವ ಕ್ರಿಮಿ ಕೀಟಗಳನ್ನು ತನ್ನ ಕೋಮಲ ಎಸಳುಗಳಿಂದ ಬಂಧಿಸಿ ಜೀರ್ಣಿಸಿಕೊಂಡು ಬಿಡುವ ಅಪೂರ್ವ ಶಕ್ತಿ ಹೊಂದಿರುವ ಕೊಲೆ ಗಟುಕ ಹೂವುಗಳು ಈ ಕೃಷ್ಣ ಪುಷ್ಪಗಳು".

“ಅಬ್ಬಬ್ಬ! ಪ್ರಕೃತಿಯ ಗರ್ಭದಲ್ಲಿ ಅದೆಷ್ಟು ವಿಚಿತ್ರ ವಿಸ್ಮಯಗಳು ಅಡಗಿಕೊಂಡಿವೆ!” ಬೆರಗಿನಿಂದ ಉದ್ಗರಿಸುತ್ತ ಕೈ ಚೀಲದಿಂದ ಗೆಣಸುಗಳನ್ನೂ ಜೇನು ತುಂಬಿದ್ದ ಕುಡಿಕೆಯನ್ನೂ ಹೊರತೆಗೆದ ವಿಜಯವಿಕ್ರಮ. ಇನ್ನೂ ಕಪ್ಪು ಕವಿಯದ ಕಡು ನೀಲಿ ಆಗಸದಲ್ಲಿ ಆಗಲೇ ಚಿನ್ನದ ಹಣತೆಗಳಂತೆ ತಾರೆಗಳು ಮಿನುಗತೊಡಗಿದ್ದವು.

ಮಧ್ಯಾಹ್ನ ಪರ್ವತಾರೋಹಣಕ್ಕೆ ತೊಡಗುವ ಮುನ್ನ ಬೆಳ್ಳಿ ಕೊಟ್ಟ ಆರೋಗ್ಯಪಚ್ಚೆ ಸಸ್ಯದ ಹಣ್ಣುಗಳನ್ನು ಸವಿದಾಗ ಅವು ಇಷ್ಟು ಶಕ್ತಿಯುತವಾದ ಹಣ್ಣುಗಳಾಗಿರಬಹುದೆಂಬುದನ್ನು ಗೆಳೆಯರು ನಿರೀಕ್ಷಿಸಿರಲಿಲ್ಲ! ಜಲ ಪಾತಗಳನ್ನೂ, ಝುರಿಗಳನ್ನೂ ದಾಟಿ, ದಟ್ಟ ಅರಣ್ಯದಲ್ಲಿ ನುಗ್ಗಿ, ಕಡಿದಾದ ಬಂಡೆಗಳನ್ನು ಹತ್ತಿ, ಶಿಖರವನ್ನು ತಲುಪಿದ್ದೂ, ಹಸಿವು ದಣಿವುಗಳ ಸೂಚನೆಯೇ ಇಲ್ಲ! ಹೊರಟಾಗ ಉಕ್ಕುತ್ತಿದ್ದ ಹುರುಪು ಮತ್ತು ಲವಲವಿಕೆ ಎಳ್ಳಷ್ಟೂ ಕಡಿಮೆಯಾಗಿಲ್ಲ!

“ಇನ್ನೂ ಹಸಿವಾಗುವ ಸುಳಿವೇ ಇಲ್ಲವಲ್ಲ!” ಎನ್ನುತ್ತ ತನ್ನ ಎರಡೂ ಕೈಗಳನ್ನು ಮೇಲಕ್ಕೆತ್ತಿ ಒಮ್ಮೆ ಮೈ ಮುರಿದ ಅನಿರುದ್ಧ.

“ಆದರೂ ಮಲಗುವ ಮುನ್ನ ಅಲ್ಪ ಆಹಾರ ಸೇವನೆಯನ್ನಾದರೂ ಮಾಡಬೇಕಲ್ಲ!” ಎನ್ನುತ್ತಾ ಒಣಗಿದ ಕಡಿ ಆರಿಸಿ ಗುಡ್ಡೆ ಮಾಡಿ ಹೊತ್ತಿಸಿ ಮಾತು ಮುಂದುವರಿಸಿದ ವಿಜಯವಿಕ್ರಮ.

“ಕಾಡಲ್ಲಿ ವಾಸವಾಗಿದ್ದರೂ, ಬಡ ಜನರಾಗಿದ್ದಾರೂ ಆತಿಥ್ಯದಲ್ಲಿ ಆ ಪಣಿಯರು ಎಷ್ಟು ಶ್ರೀಮಂತರಾಗಿರುವರು ಕಂಡೆಯಾ! ಅವರ ಪಾಡಿಯಲ್ಲಿ ನಾವು ಬಿಟ್ಟು ಬಂದಿರುವ ಕುದುರೆಗಳನ್ನು ನೋಡಿಕೊಳ್ಳುವ ಜವಾಬ್ದಾರಿ ವಹಿಸಿಕೊಂಡದ್ದಲ್ಲದೇ, ರಾತ್ರಿಯ ಆಹಾರಕ್ಕೆಂದು ಇವನ್ನೆಲ್ಲ ಚೀಲಕ್ಕೆ ತುಂಬಿ ಕೊಟ್ಟಿರುವನು ಪಣಿಯರ ಕುಟ್ಟ ಬೆಳ್ಳಿ! ಪಾಪ! ಎಂತಹ ಅಮಾಯಕ ಜನ ಈ ಕಾಡುವಾಸಿಗಳು!”

“ಅಮಾಯಕರು! ಇದೇ ನಮಗೆ ಕಾತರ ಉಂಟು ಮಾಡುವ ವಿಷಯವಾಗಿದೆ ವಿಜಯ! ನಮ್ಮ ರಾಜ್ಯಗಳಲ್ಲಿಯ ನಗರಗಳನ್ನು ದೋಚುವುದಲ್ಲದೆ, ಈ ಅಮಾಯಕರನ್ನು ದುರುಪಯೋಗ ಪಡಿಸಿಕೊಂಡು ಕಾಡುಗಳನ್ನು ಕಡಿಸಿ, ತಮ್ಮ ದೇಶಕ್ಕೆ ಮರಮಟ್ಟು ಸಾಗಿಸುವ ಸಾಹಸಕ್ಕೂ ಹಾಕಿರುವವರಲ್ಲ ಈ ವಿದೇಶೀ ವ್ಯಾಪಾರೀಗಳು! ಅತ್ಯಮೂಲ್ಯವಾದ ಸಂಪನ್ಮೂಲಗಳನ್ನು ತನ್ನಲ್ಲಡಗಿಸಿಕೊಂಡಿರುವ ನಮ ವನಗಳನ್ನು ನಾಶ ಮಾಡಿ ನಮ್ಮ ನಾಡು ಕಾಡ ಎಲ್ಲವನ್ನೂ ಒಟ್ಟೊಟ್ಟಿಗೆ ಸುಡುಗಾಡು ಮಾಡಲು ಹತ್ತಿರುವವರಲ್ಲ ಪರಕೀಯ ಪಾಪಿಗಳು!” ಅನಿರುದ್ಧನ ಧ್ವನಿ ಮಾತ್ರವಲ್ಲದೆ ಒಡಲೂ ಉದ್ವೇಗದಿಂದ ಕಂಪಿಸತೊಡಗಿತು.

ಅದೇ ಉದ್ವೇಗ! ಅದೇ ಕೋಪಾವೇಶ! ಅದೇ ಕಟುವಾದ ಮಾತುಗಳು! ಪದೇ ಪದೇ ರಾಯರನ್ನೇ ಜ್ಞಾಪಿಸುತ್ತಿರುವುದೇಕೆ? ವಲ್ಲಭರಾಯರು ವೇಷ ಮರೆಸಿಕೊಳ್ಳುವುದರಲ್ಲಿ ಅತಿ ಸಮರ್ಥರು ಎಂದು ವಿಜಯ ಅರಿತೇ ಇದ್ದನು. ಹಾಗಾದರೇ? ಎಂದಿನಂತೆ ಸ್ನೇಹಿತನ ಬಗ್ಗೆಗಿನ ಆ ವಿಚಿತ್ರ ಅನುಮಾನ ಈಗಲೂ ಆತನ ಮನಸ್ಸಲ್ಲಿ ಹೆಡೆಯೆತ್ತಿತ್ತು.

ತನ್ನ ಮಿತ್ರ ತನ್ನನ್ನೇ ದುರುಗುಟ್ಟಿಕೊಂಡು ನೋಡುತ್ತಿರುವುದು ಅರಿವಾಗಿ ಥಟ್ಟೆಂದು ಅನುರುದ್ಧನ ಭಾವೋಗ್ವೇಕ ಶಮನಗೊಂಡಿತು.

“ಏಕೆ ಹಾಗೆ ದಿಟ್ಟಿಸುತ್ತಿರುವ ವಿಜಯ?”

“ಏನಿಲ್ಲ ಮಿತ್ರ! ನಿನ್ನ ಈ ಕೋಪಾವೇಶ ಕಂಡರೆ... “ವಿಜಯವಿಕ್ರಮನ ಮಾತು ಮುಗಿಯುವ ತನಕ ಮೌನವಾಗಿ ಕಾಯುವ ತಾಳ್ಮೆ ಅನಿರುದ್ಧನಿಗೆ ಇಲ್ಲವಾಯಿತು.

“ನಿನಗೆ ಮಾತ್ರ ಆ ರೋಶವಿಲ್ಲವೇ? ನಿನ್ನಲ್ಲೂ, ನನ್ನಲ್ಲೂ, ರಾಜ್ಯದ ಎಲ್ಲ ಪ್ರಜೆಗಳಲ್ಲೂ, ಅಷ್ಟೇ ಏಕೆ? ಈ ಅಮಾಯಕ ಪಣಿಯರಲ್ಲೂ ಕೂಡ ಇಂತದ್ದೇ ಪ್ರತಿಕ್ರಿಯೆಯನ್ನು ಕೆರಳಿಸುವಂತಹ ಹೀನವಾದ ಸುದ್ದಿಯನ್ನಲ್ಲವೇ ಗೂಡಾಚಾರರು ತಂದಿರುವರು?” ಕೆಂಗಣ್ಣನ್ನು ಬೀರುತ್ತ ಅನಿರುದ್ಧ ‘ಕಟ ಕಟ’ ಹಲ್ಲು ಮಸೆದಿದ್ದು ಜೋರಾಗಿಯೇ ಕೇಳಿಸಿತು.

ನಿಜ ! ತನ್ನನ್ನು ಕರೆಯಿಸಿ ದೊರೆಗಳಾದ ವಸಂತವಲ್ಲಭರಾಯರು ಸುದ್ಧಿಯನ್ನು ಪ್ರಸ್ತಾಪಿಸಿದಾಗ ತನ್ನ ರಕ್ತವೂ ಬಿಸಿ ಏರಿ ಎಷ್ಟರ ಮಟ್ಟಿಗೆ ಕುದಿದಿತ್ತು! ದರೋಡೆಕೋರರನ್ನು ಆ ಕ್ಷಣವೇ ಸಿಗಿದು ಬಡಿದು ಹಾಕಬೇಕೆಂಬ ಆವೇಶ ಎದೆಯಲ್ಲಿ ಬುಗಿಲೆದ್ದಿತ್ತು! ಕೋಪದಿಂದಲೂ ಉದ್ವೇಗದಿಂದಲೂ ಒಡಲು ಕಂಪಿಸಿತ್ತು!

ಕಂಪೆನಿ ಸರಕಾರದ ಸಿಬ್ಬಂದಿಗಳು, ವಸಂತಪುರಿ. ಗಡಿಯಲ್ಲಿಯ ಘಟ್ಟ ಪ್ರದೇಶದ ಕಾಡುಗಳಿಗೆ ನುಗ್ಗಿ ಮರ ಕಡಿಸಿ ಹೊಳೆಗೆ ಉರುಳಿಸಿ ಸಾಗಿಸುತ್ತಿರುವುದಾಗಿಯೂ, ಸಮುದ್ರ ಸೇರಿದ ಮರಮಟ್ಟುಗಳನ್ನು ತಮ್ಮ ಹಡಗುಗಳಿಗೆ ಕಟ್ಟಿಕೊಂಡು ತಮ್ಮ ದೇಶಕ್ಕೆ ಒಯ್ಯುತ್ತಿರುವುದಾಗಿಯೂ ಸಮುದ್ರ ತೀರದ ಗೂಡಾಚಾರರು ಸುದ್ದಿ ತನಗೆ ಅಪ್ಪಣೆಯಾಯಿತು. ಮದರಾಸಿನಿಂದ ಸ್ನೇಹ ಕೈ ಚಾಚಿ ಆಗಮಿಸಲಿರುವ ಕಂಪೆನಿ ಸರಕಾರದ ದೂತನನ್ನು ಯಾವ ರೀತಿ ಸ್ವಾಗತಿಸಿ ಏನು ಸಂದೇಶವನ್ನು ಕೊಟ್ಟು ಕಳುಹಿಸಬೇಕೆಂಬುದು ನಂತರ ನಿರ್ಧಾರವಾಗಲಿದೆ.

ಆದರೂ, ಈ ತಪಾಸಣೆಗಾಗಿ ತನ್ನೊಂದಿಗೆ ಬಂದು ಸೇರಿಕೊಂಡಿದ್ದ ಅನಿರುದ್ಧನಲ್ಲಿ ಪದೇ ಪದೇ ಕೆರಳುವ ಈ ಅಕ್ರೋಶ ಸ್ವಲ್ಪ ಅತಿಯಾಯಿತೋ ಅನ್ನಿಸಿತು.

“ನಾವು ವಿಚಾರಿಸಿದ ಮಟ್ಟಿಗೆ ಈ ಪ್ರದೇಶದಲ್ಲಿ ಅಂತಹ ಚಟುವಟಿಕೆಗಳು ಯಾವುವೂ ಕಂಡುಬಂದಿಲ್ಲ. ಆದರೂ ಕಾಡಲ್ಲಿ ಅಲ್ಲಲ್ಲಿ ಚದುರಿದಂತಿರುವ ಇತರ ಆದಿವಾಸಿಗಳ ತಾಣಗಳನ್ನೂ ನಾವು ಪರಿಶೀಲಿಸಿಯೇ ಹಿಂದಿರುಗಬೇಕು”. ಪರಿಸ್ಥಿತಿಯನ್ನು ಸಹಜಗೊಳಿಸುವ ರೀತಿಯಲ್ಲಿ ಮಾತನಾಡುತ್ತ ಜೇನಿನ ಕುಡಿಕೆಯ ಮೇಣದ ಮುಚ್ಚಿಗೆಯನ್ನು ತೆರೆದ ವಿಜಯವಿಕ್ರಮ, ಬೆಂಕಿಯಲ್ಲಿ ಬೇಯಿಸಿದ ಗೆಣಸು ಸುಲಿದು ಜೇನಿನಲ್ಲಿ ಅದ್ದಿ ಗೆಳೆಯನ ಕೈಗೆ ಕೊಟ್ಟನು.

ಗೆಳೆಯರಿಬ್ಬರೂ ವಿವರ ಹೇಳಿ, ವಿಚಾರಿಸಿ ನಂತರ ಎಚ್ಚರಿಸಿದಾಗ ಪಣಿಯರೆಲ್ಲ ಅದೆಷ್ಟು ರೋಷಗೊಂಡಿದ್ದರು! ‘ನಮ್ಮ ಬನದ್ಯಾವಿ ಮ್ಯಾಕೆ ಕೈ ಮಾಡಕ್ಕ ಯಾವನಿಗೆ ಧೇರ್ಯ ಅದೋ ನೋಡೋವ?! ಅಂತಾಪಿಳ್ಳೇನ ನಮ್ ಕುಳಿಯನ್ ಸಾಮಿ ಸುಮ್ಮಕೆ ಬುಟ್ಟಾನಾ? ಇದು ಹುಲಿಯಪ್ಪ ದೇವನ ಬನ! ಯಾರ ಕೈವಾಡವೂ ಇಲ್ಲಿ ನಡೆಯಂಗಿಲ್ಲ!” ಒಕ್ಕೊರಳಿನಲ್ಲಿ ಆಕ್ರೋಶಗೊಂಡು ಮೊಳಗಿದ್ದರು.

‘ಏನೂ ಭಯ ಬ್ಯಾಡಿ! ಈ ಕಾಡು ನಮ್ ತಾಯಿ. ಅವಳ ಕಾಯೋದು ನಮ್ ಜವಾಬ್ದಾರಿ! ಹುಲಿಯಪ್ಪನ್ ಕಟ್ಟೆಲಿ ಕಾಯಿ ಸೇವೆ ಮಾಡಿಸಿ ಬಂದ್ರ ಎಲ್ಲ ಚೆನ್ನಾಗತ್ರ!’ ಎಂದು ಬೆಳ್ಳಿ ಕುಟ್ಟನ್ ಆಶ್ವಾಸನೆ ನೀಡಿದ್ದ.

ಬೆಳ್ಳಿ ಕುಟ್ಟನ್ ನೀಡಿದ ಭರವಸೆ ಮತ್ತು ಶಿಖರದ ಮೇಲಿನ ನೀಲಿ ಕಡಲ ವೀಕ್ಷಣೆಯಿಂದಾಗಿ ಮನದಲ್ಲಿ ತುಸು ನೆಮ್ಮದಿ ಬಂದು ಕೂತಿರುವುದೇನೋ ನಿಜ. ಆದರೂ? ತಮ್ಮ ತಮ್ಮ ಯೋಚನೆಗಳಲ್ಲಿ ಮಗ್ನರಾಗಿ ಮೌನವಾಗಿಯೇ ಗೆಣಸನ್ನು ಸವಿಯ ತೊಡಗಿದರು ಗೆಳೆಯರು.

ಕವಿದಿದ್ದ ನೀರವತೆಯನ್ನು ಇದ್ದಕ್ಕಿದ್ದ ಹಾಗೆಯೇ ‘ಗುರ್’ ಎಂಬ ಗರ್ಜನೆ ಬೇಧಿಸಿತು. ವಿಜಯನ ಕೈ ಸೊಂಟಕ್ಕೆ ಸಿಕ್ಕಿಸಿದ್ದ ಖಡ್ಗವನ್ನು ಅನೈಚ್ಛಿಕವಾಗಿ ಹೊರ ಸೆಳೆಯಿತು. ಅನಿರುದ್ಧನೋ ಮರದ ಬೊಡ್ಡೆಗೆ ಆನಿಸಿಟ್ಟಿದ್ದ ತನ್ನ ಈಟಿಯನ್ನು ಚಕ್ಕನೆ ಕೈಗೆತ್ತಿಕೊಂಡ.

ಇನ್ನೂ ಚಂದ್ರೋದಯವಾಗಿರದ ಮಬ್ಬು ಮಬ್ಬಾದ ಆ ಮುಂಗತ್ತಲಿನಲ್ಲಿ ಕೆಂಡದಂತೆ ಪ್ರಜ್ವಲಿಸುತ್ತಿದ್ದ ಕಣ್ಣುಗಳೆರಡು ತಮ್ಮ ಮೇಲೆ ನೆಲೆಸಿರುವುದು ಭಾಸವಾಯಿತು.

ಮೂವತ್ತಡಿಗಳ ಅಂತರದಲ್ಲಿ ತಮ್ಮೆದುರು ನಿಂತಿದ್ದದ್ದು ಒಂದು ಹೆಬ್ಬುಲಿ ಎಂಬ ಅರಿವಾಯಿತು ಜೋರಾಗಿ ಗರ್ಜಿಸಿದಾಗ ತೆರೆದ ಅದರ ಭಯಂಕರವಾದ ಕೆಂಪು ಬಾಯಿಗೆ ತಾವು ಯಾವ ಕ್ಷಣದಲ್ಲೂ ತುತ್ತಾಗಬಹುದೆಂದು ಅರಿತಿದ್ದರೂ ಆಯುಧಗಳನ್ನು ಬಿಗಿಯಾಗಿ ಹಿಡಿದು ಅಲುಗಾಡದೆ ಏಕಾಗ್ರಚಿತ್ತರಾಗಿ ಕುಳಿತಲ್ಲೇ ಕುಳಿತು ಹುಲಿಯನ್ನು ದಿಟ್ಟಿಸುತ್ತಿದ್ದರು ಗೆಳೆಯರು ! ಗೆಣಸು ಬೇಯಿಸಿದ್ದ ಬೆಂಕಿಯನ್ನು ತಾವು ಕೂಡಲೇ ಶಮನಗೊಳಿಸಿರಬಾರದಿತ್ತೋ ಏನೋ ಅನ್ನಿಸಿತು !

ಇದ್ದಕ್ಕಿದ್ದ ಹಾಗೆಯೇ ಮತ್ತೊಂದು ಹುಲಿಯ ಗರ್ಜನೆ ಅಡವಿಯಿಂದ ಕೇಳಿ ಬಂದ ಗರ್ಜನೆ ಕ್ರಮೇಣ ಮೃದುವಾಗಿ ಮೆದುವಾಗಿ ಕೇಳಿಸತೊಡಗಿತು. ಗೆಳೆಯರ ಮೇಲೆ ಕಣ್ಣುಗಳನ್ನು ನೆಟ್ಟು ನಿಂತಿದ್ದ ಹೆಬ್ಬುಲಿ ಕಿವಿಗಳನ್ನು ನಿಮಿರಿಸಿ ಆಲಿಸಿತು. ಮರು ಕ್ಷಣ ಮತ್ತೊಮ್ಮೆ ಜೋರಾಗಿ ಗರ್ಜಿಸಿ ಅಡವಿಯೊಳಕ್ಕೆ ಹಾರಿ ಕಣ್ಮರೆಯಾಯಿತು.

“ವಿಜಯ ! ಖಡ್ಗ ಒರೆಯಲ್ಲಿಟ್ಟು ಆರಾಮವಾಗಿರು! ಹುಲಿರಾಯ ತನ್ನ

ಸಂಗಾತಿಯನ್ನು ಅರಸಿ ಓಡಿ ಹೋದ!'' ನಗುತ್ತ ನುಡಿದು ಮತ್ತೆ ಮರಕ್ಕೆ ಒರಗಿ ಕುಳಿತ ಅನಿರುದ್ಧ.

ಅಡವಿಯಿಂದ ಸ್ವಲ್ಪ ಸಮಯದ ವರೆಗೆ ಮೃದುವಾಗಿ ಕೇಳಿಬಂದ ಹುಲಿಯ ಧ್ವನಿ ಕಡೆಗೊಮ್ಮೆ ನಿಂತೇ ಹೋಯಿತು. ನೆಮ್ಮದಿಯಿಂದ ನಿಟ್ಟುಸಿರು ಬಿಟ್ಟು ತಾನೂ ಕಾಲು ಚಾಚಿಕೊಂಡ ವಿಜಯ, "ಅನಿರುದ್ಧ! ಈ ಹುಲಿ ಏನಾದರು ನಮ್ಮ ಮೇಲೆರಗಿದ್ದಿದ್ದರೆ ಏನು ಮಾಡುತ್ತಿದ್ದೆವೋ?'' ಎಂದು ಉದ್ಗರಿಸಿದ.

"ಮಾಡುವುದೇನು? ಬೆಳ್ಳಿ ಹೇಳಿದ್ದು ನೆನಪಿಲ್ಲವೇ? ಇದು ಹುಲಿಯಪ್ಪನ ಬನ! ಹುಲಿಯಪ್ಪಾ ಕಾಪಾಡಪ್ಪಾ ಎಂದು ಕೈಯೆತ್ತಿ ಮುಗಿದಿದ್ದರೆ ಮುಗಿಯುತ್ತಿತ್ತು!'' ಮೃದುವಾಗಿ ನಗುತ್ತ ನುಡಿದ ಅನಿರುದ್ಧ.

"ತಮಾಷೆ ಬೇಡ ಗೆಳೆಯ!'' ನಸು ಕೋಪದಿಂದ ನುಡಿದು ಮಾತು ಮುಂದುವರಿಸಿದ ವಿಜಯ.

'ನಿನಗೆ ವಿಷಯವೇ ಗೊತ್ತಿಲ್ಲವೇನು? ವಲ್ಲಭರಾಯರು ಬೇಟೆಗೆ ಹೋಗಿದ್ದಾಗ ತನ್ನ ಮೇಲೆರಗಿದ ಹೆಬ್ಬುಲಿಯನ್ನು ಬರಿಗೈಯಿಂದಲೇ ಕೊಂದು ಹಾಕಿದರಂತೆ ! ಊರಲ್ಲೆಲ್ಲ ಇದೇ ಮಾತಾಗಿದೆ ! ಅಗಾಧ ಶಕ್ತಿ ಹೊಂದಿದ, ಅತಿ ಕ್ರೂರೀ ಮತ್ತು ನಿರ್ಧಯೀಯಾದ ಒಂದು ಹೆಬ್ಬುಲಿಯನ್ನು ನಾವು ಈಗ ತಾನೇ ಕಂಡಿದ್ದೀವಿ! ಇಂತಹ ಒಂದು ಮೃಗವನ್ನು ಮುಖಾಮುಖಿ ಎದುರಿಸಿ ಕೊಲ್ಲುವುದು ಎಂಬುದು. ಎಷ್ಟೇ ಪರಾಕ್ರಮಶಾಲಿಯಾಗಿದ್ದರೂ ಓರ್ವ ನರಮಾನವನಿಂದ ಸಾಧ್ಯವಾಗುವ ಕೆಲಸವೇ ಎಂದು ಕೆಲವರಿಗೆ ಅನುಮಾನ! ನಿನಗೇನನ್ನಿಸುತ್ತದೆ? ಹೇಳು ಗೆಳೆಯ!''

ಒಂದು ನಿಮಿಷ ಮೌನವಾಗಿದ್ದ ಅನಿರುದ್ಧ, ನಂತರ ನಿಧಾನವಾಗಿ ಮಾತನಾಡಿದ.

"ಮೈಸೂರು ಮಲ್ಲಕೇಸರಿಗಳನ್ನು ಗೆದ್ದ ಮಹಾಶೂರ! ಭಾರಿಯಾದ ಅತಿ ಬಲಿಷ್ಠ ಕಾಡು ಕೋಣನನ್ನು ಏಕಾಏಕಿ ಎದುರಿಸಿ, ಬರಿಗೈಯಿಂದಲೇ ಅದನ್ನು ಕೊಂದ ಅತ್ಯಂತ ಪರಾಕ್ರಮ ಶಾಲಿಯಾದ ಮಹಾಧೀರ! ಅಂತಹ ವೀರಾದಿವೀರ ವಿಜಯವಿಕ್ರಮನಿಗೆ ಇಂತಹ ಅನುಮಾನ ಸಲ್ಲುವುದೇ?''

ಹೌದಲ್ಲವೇ ! ಎಂದೋ ಜರುಗಿ ಹೋಗಿದ್ದ, ತಾನು ಮರೆತೇ ಹೋಗಿದ್ದ ಆ ಘಟನೆ ವಿಜಯವಿಕ್ರಮನ ನೆನಪಿನಲ್ಲಿ ಮತ್ತೆ ಮೆಲ್ಲನೆ ಮೂಡ ತೊಡಗಿತು.

ಅಮ್ಮನವ ಸೇವೆಗೆಂದು ಗ್ರಾಮದ ಹತ್ತು ಮಂದಿ ಜನ ಕಾಲ್ನಡಿಗೆಯಲ್ಲೇ ಆ ದಟ್ಟ ಕಾಡಲ್ಲಿ ನೆಲೆಸಿದ್ದ ಗುಡಿಯನ್ನು ಕುರಿತು ಪ್ರಯಾಣ ಬೆಳೆಸಿದ್ದರು. ಮಾರ್ಗ ತೋರಿಸಿಕೊಂಡು ವಿಜಯ ಮುನ್ನೆಡೆಯುತ್ತಿದ್ದಾಗ ಇದ್ದಕ್ಕಿದ್ದ ಹಾಗೆಯೇ ಒಂದು ಮುಳ್ಳು ಪೊದೆಯ ಹಿಂದಿನಿಂದ ಪ್ರತ್ಯಕ್ಷವಾಯಿತು. 'ಅದು'! ಗ್ರಾಮದ ಅರಳಿ ಕಟ್ಟೆಯ ಗುಡಿಗೋಪುರದಷ್ಟು ಎತ್ತರವಾದ, ಬಹು ಗಾತ್ರವಾದ ದೇಹ, ಕೆಂಡದಂತ ಕಣ್ಣುಗಳು. ಹರಿತವಾದ ತುದಿಗಳಿಂದ ಕೂಡಿದ್ದ ದಪ್ಪ ಕೊಂಬುಗಳು. ಬಿರಿದಿದ್ದ ಮೂಗಿನಿಂದ 'ಚೆಳ್ಳ'ನ ಪುಟಿಯುತ್ತಿದ್ದ ಬಿಸಿ ಉಸಿರು. ನಿಂತ ನೆಲವನ್ನು ಕೆತ್ತಿ ಕೆದಕಿ ಧೂಳೆಬ್ಬಿಸುತ್ತಿದ್ದ ಅದರ ಬಲಿಷ್ಟವಾದ ಮುಂಗಾಲುಗಳಲ್ಲಿ ಆಕ್ರೋಷ ತುಂಬಿತ್ತು.

ಎಲ್ಲರೂ ಒಂದು ಕ್ಷಣ ಗರ ಬಡಿದವರಂತೆ ನಿಂತರು. ಮರುಕ್ಷಣ 'ಅಯ್ಯೋ ಅಯ್ಯೋ' ಎಂದು ಬೊಬ್ಬೆಯಿಡುತ್ತ ಅತ್ತ ಇತ್ತ ಚದುರಿ ಪರದಾಡುತ್ತ ಓಡತೊಡಗಿದರು.

ಈ ಗಲಭೆಯ ಕಾರಣ ಮತ್ತಷ್ಟು ಕೆರಳಿ, ಅವರ ಮೇಲೆ ಹಾಯಲು ಅಣಿಯಾಯಿತು. ಮೊದಲೇ ರೋಸಿ ಹೋಗಿದ್ದ ಆ ಕಾಡು ಕೋಣ.

ಆ ಸಮಯದಲ್ಲಿ ಅಪಾಯಕಾರಿಯಾದ ಒಂಟಿ ಕೋಣನನ್ನು ಎದುರಿಸಲು ಒಂಟಿಯಾಗಿಯೇ ಮುನ್ನುಗ್ಗಿದ್ದ ವೀರ ವಿಜಯವಿಕ್ರಮ.

ಕಣ್ಣು ಮಿಟುಕಿಸುವುದರಲ್ಲಿ ಧೂಳಿನ ಮಂಡಲದೊಳಗೆ ತಾನು ಮತ್ತು ಯಮನ ವಾಹನದಂತಿದ್ದ ಕಾಡು ಕೋಣ! ಯುಗಗಳಂತೆ ಭಾಸವಾದ ಕೆಲವು ನಿಮಿಷಗಳ ನಂತರ ಕಾಡು ಕೋಣ ಗುಡ್ಡೆಯಾಗಿ ಬಿದ್ದಿತು ! ಅದರ ಎರಡು ಕೊಂಬುಗಳನ್ನೂ ತನ್ನ ಎರಡು ಕೈಗಳಲ್ಲಿ ಹಿಡಿದುಕೊಂಡು ಪಕ್ಕಕ್ಕೆ ಉರುಳಿಕೊಂಡಿದ್ದ ತನ್ನನ್ನು ಎತ್ತಿ ಹೆಗಲ ಮೇಲೆ ಕೂರಿಸಿಕೊಂಡು ಅದೆಷ್ಟು ಸಂಭ್ರಮ ಪಟ್ಟಿದ್ದರು ತನ್ನ ಊರವರು !

ಅಂತಹ ಭೀಕರವಾದ ತುರ್ತಿನ ಸಮಯದಲ್ಲಿ ತಾನು ಹೇಗೆ ವರ್ತಿಸಿದೆ? ಅದನ್ನು ಒಬ್ಬೊಂಟಿಯಾಗಿ ಎದುರಿಸಲು ಹೇಗೆ ನಿರ್ಧರಿಸಿದೆ? ಕಾಡು ಕೋಣನನ್ನು ಕಂಡಿದ್ದು, ಅದನ್ನು ಎದುರಿಸಲು ನಿರ್ಧರಿಸಿದ್ದು, ಅದನ್ನು ಕುರಿತು ಮುನ್ನುಗ್ಗಿದ್ದು ಎಲ್ಲವೂ ಒಂದೇ ಸಮಯದಲ್ಲಿ ಕ್ಷಣಾರ್ಧದಲ್ಲಿ ನಡೆದುಹೋದ ಘಟನೆಗಳು! ಇದನ್ನೇ ಚಿತ್ತಾವಧಾನ ಎನ್ನುವರೆ?

ಇಂತಹ ಚಿತ್ತಾವಧಾನದಿಂದಲೇ ರಾಯರು ಹುಲಿಯನ್ನು ಎದುರಿಸಿರಬೇಕು! ಸಾಧ್ಯ! ಇದು ಸಾಧ್ಯ!

ಚಿಂತೆಯ ಲಹರಿಯಲ್ಲಿ ತೇಲಿ ತೇಲಿ ಹೋಗುತ್ತಿದ್ದ ವಿಜಯವಿಕ್ರಮನ ಕಣ್ಣುಗಳ ಮೇಲೆ ಬಹಳ ಹೊತ್ತಿನ ನಂತರ ಭಾರವಾಗಿ ಬಂದು ಕುಳಿತಳು ನಿದಿರಾ ದೇವಿ !

****

ಮೇಜರ್ ಜೇಮ್ಸ್ ಕುಳಿತಲ್ಲಿ ಕೂರಲಾರದೆ ಚಡಪಡಿಸಿದ. ಮೃದು ಮೆತ್ತೆಯ ಆಸನ ಮುಳ್ಳಾಗಿ ಚುಚ್ಚಿತು. ನದಿ ತೀರದಲ್ಲಿದ್ದೂ ಬಿಸಿಲಿನ ಶಾಖದಿಂದ ಇಡೀ ಗುಡರವೇ ಕುಲುಮೆಯಾಗಿ ಹೋದಂತೆ ಆತನನ್ನು 'ದಗ ದಗ' ದಹಿಸುತ್ತಿತ್ತು, ಮುಖದಿಂದ ಇಳಿಯುತ್ತಿದ್ದ ಬೆವರಿನ ಸತತವಾದ ಕಾಲುವೆಯನ್ನು ನುಣ್ಣನೆಯ ರುಮಾಲಿನಿಂದ ಒರೆಸಿ ಒರೆಸಿ ಆತನ ಬಿಳಿ ತೊಗಲು ಕೆಂಪಾಗಿ ಮಾಗಿದ ಪರಂಗಿ ಹಣ್ಣಾಗಿ ಹೋಗಿತ್ತು. ಇನ್ನೂ ಆ ಉರಿಯನ್ನು ತಾಳಲಾರದೆ ಎದ್ದ ಜೇಮ್ಸ್ ಗುಡಾರದ ಮೂಲೆಯಲ್ಲಿದ್ದ ಮಣ್ಣಿನ ಗಡಿಗೆಯಿಂದ ತಣ್ಣನೆಯ ನೀರನ್ನು ಬಗ್ಗಿಸಿ ಮುಖದ ಮೇಲೆ ಎರಚಿಕೊಂಡನು. ತನ್ನ ದೇಶದ ಶಿಷ್ಟಾಚಾರವನ್ನೆಲ್ಲ ಬದಿಗೆ ನೂರಿ ಎರಡೂ ಕೈಗಳಿಂದ ಆ ಗಡಿಗೆಯನ್ನು ಎತ್ತಿ ಹಿಡಿದು ಅದರಲ್ಲಿದ್ದ ನೀರನ್ನೆಲ್ಲ ಒಂದೇ ಉಸಿರಲ್ಲಿ 'ಗಟ ಗಟ' ಗಂಟಲಿಗೆ ಸರಿಸಿಕೊಂಡನು. ಎದೆಯ ಮೇಲೆ ಬಿದ್ದ ನೀರಿನಿಂದ ತೊಯ್ದಿದ್ದ ಮೇಲಂಗಿ ಆ ಬಿಸಿಲಿನ ಬೇಗೆಗೆ ಹಿತವೆನ್ನಿಸಿತು.

ಗುಡಾರದ ತೆರೆಯನ್ನು ಪಕ್ಕಕ್ಕೆ ಸರಿಸಿದ ಜೇಮ್ಸ್, ಮೆಲ್ಲನೆ ಹೊರಗೆ ಹೆಜ್ಜೆಯಿಟ್ಟಾಗ, ಸ್ವಲ್ಪ ದೂರದಲ್ಲಿ ನಿಂತಿದ್ದ ಸೇವಕ ಸನಿಹಕ್ಕೆ ಓಡಿ ಬಂದನು.

"ಏನಾದರೂ ಬೇಕಿತ್ತೆ ದೊರೆ?'' ಎಂದು ವಿನಯದಿಂದ ಪ್ರಶ್ನಿಸಿದನು.

ಸೇವಕನೆಂಬ ಹೆಸರಿನಲ್ಲಿ ತನ್ನನ್ನು ಎವೆ ಇಕ್ಕದೆ ಕಾಯಲು ನಿಯಮಿಸಲ್ಪಟ್ಟಿರುವ ಕಾವಲುಗಾರ ಈತ ಎಂಬ ವಿಷಯವನ್ನು ಜೇಮ್ಸ್ ಗ್ರಹಿಸಿಕೊಂಡೇ ಇದ್ದ.

"ನಿಮ್ಮ ದೊರೆಗಳ ಉದಾರ ಗುಣ ಜಗಪ್ರಸಿದ್ಧವಲ್ಲವೇ? ವೈರಿಗೂ ಕರುಣಿಸುವ ಕರುಣಾಳರ ರಾಜ್ಯದಲ್ಲಿ ಯಾರಿಗೆ ತಾನೇ ಏನು ಕೊರತೆ ಇರಲು ಸಾಧ್ಯ? ಸೇವಕನ ಮೊಗದಲ್ಲಿ ಹೆಮ್ಮೆ ತುಂಬಿ ತುಳುಕಿತು.

"ಅದು ಸರಿ ! ನೀವ್ಯಾಕೆ ಹೊರಕೆ ಬಂದಿರಿ?''

ಸೇವಕ ಚತುರನೇ ಹೌದು! ಸಹಜವಾಗಿ ಮಾತನಾಡುತ್ತಿದ್ದರೂ ತನ್ನ ಕರ್ತವ್ಯ ಮರೆಯದೆ ಬಹಳ ಎಚ್ಚರಿಕೆಯಿಂದಲೇ ಇರುವನು! ಇವನಿಗೆ ತಾನೆ ತನ್ನ ದೊರೆಗಳ ಮೇಲೆ ಅದೆಷ್ಟು ಪ್ರೀತ್ಯಾಧರ ! ವಿಶ್ವಾಸ ! ಸ್ವಾಮಿ ನಿಷ್ಠೆ! ಎಲ್ಲರ ಮೊಗದಲ್ಲೂ ಅದೆಷ್ಟು ಸಂತೋಷ ! ತೃಪ್ತಿ! ಶಾಂತಿ!

ಪಶ್ಚಿಮ ಘಟ್ಟದಲ್ಲಿ ಉದ್ಭವವಾಗುವ ಎರಡು ಪುಣ್ಯ ನದಿಗಳ ನಡುವಿನ ವಿಶಾಲವಾದ ಸೀಮೆಯ ರಾಜಧಾನಿ ವಸಂತಪುರಿ. ಘಟ್ಟ ಪ್ರದೇಶದ ಸಂಪನ್ಮೂಳಗಳಿಂದಲೂ, ತುಂಬಿ ತುಳುಕುವ ನದಿ ಸವರಿ ಬಂದ ತಂಗಾಳಿಯಲ್ಲಿ ಹೊಯ್ದಾಡುವ ಫಲ ಪುಷ್ಪ ವೃಕ್ಷಗಳಿಂದಲೂ, ನದಿಯ ನೀರುಂಡು ಸಮೃದ್ಧವಾಗಿ ಬೆಳೆದ ಹೊಸ ಗದ್ದೆಗಳಿಂದಲೂ, ಸದಾ ಅರಳಿದ್ದ ಮೊಗಗಳನ್ನು ಹೊತ್ತ ಪ್ರಜೆಗಳಿಂದಲೂ ಕೂಡಿದ್ದ ವಸಂತಪುರಿಯಲ್ಲಿ ನಿತ್ಯ ವಸಂತೋತ್ಸವವೋ ಎಂಬಂತೆ ವೈಭವದಿಂದ ಕಂಗೊಳಿಸುತ್ತಿತ್ತು. ಗಣಿಗಾರಿಕೆ ಮತ್ತು ಕಾಫಿ ತೋಟಗಾರಿಕೆ ಗಳಿಕೆ ಸೂಕ್ತವಾದ ಘಟ್ಟ ಪ್ರದೇಶಗಳನ್ನೊಳಗೊಂಡಿರುವ ಇಂತಹ ಶ್ರೀಮಂತ ರಾಜ್ಯವನ್ನು ಆದಷ್ಟು ಬೇಗನೆ ವಷಪಡಿಸಿಕೊಳ್ಳಲು ಕಂಪೆನಿ ಸರಕಾರ ತವಕಿಸುತ್ತಿರುವುದರಲ್ಲಿ ಆಶ್ಚರ್ಯವೇನಿಲ್ಲ. ಅದಕ್ಕಾಗಿ ಮಾಡಿದ ಯತ್ನಗಳನ್ನೆಲ್ಲ ವಿಫಲಗೊಳಿಸುತ್ತಿರುವ ಆ ರಾಮ ! ವಸಂತ ವಲ್ಲಭ ರಾಯ! ಆತನಿಗೆ ತಾನೇ ಅದೆಷ್ಟು ದರ್ಪ! ಅದೆಷ್ಟು ಸೊಕ್ಕು ! ತಾನು ಯಾರಿಗೂ ತಲೆ ಬಾಗುವುದಿಲ್ಲವಂತೆ ! ತನ್ನ ರಾಜ್ಯವನ್ನು ಯಾರಿಗೂ ದತ್ತು ಕೊಡುವುದಿಲ್ಲವಂತೆ ! ತನ್ನ ರಾಜ್ಯದ ಹಿತ ತನಗೇ ಸೇರಿದ್ದಂತೆ ! ವಿದೇಶಿಯರಿಂದ

ಆಡಳಿತದ ಆಲೋಚನೆಗಳು ತನಗೆ ಬೇಕಿಲ್ಲವಂತೆ ! ಪ್ರಜೆಗಳೂ, ರಾಜ್ಯಾಧಿಕಾರಿಗಳೂ ಸಂತೃಪ್ತಿ ಸಂತೋಷಗಳಿಂದ ಶಾಂತಿಯಿಂದಿದ್ದ ಕಾರಣ, ಇತರ ರಾಜ್ಯಗಳಲ್ಲಿ ಮಾಡಿದಂತೆ ಮಿತ್ರಬೇದ ಮಾಡಿ ಈ ರಾಜ್ಯವನ್ನು ವಶಪಡಿಸಿಕೊಳ್ಳುವುದು ಸುಲಭದ ಕೆಲಸವಲ್ಲ ಎಂಬುದನ್ನು ಕಂಪೆನಿ ಸರಕಾರ ಅರಿತುಕೊಂಡಿತ್ತು. ಸಾಮೋಪಾಯ ಹೂಡಿ ರಾಜ್ಯ ಹಿಡಿಯುವ ತಂತ್ರವನ್ನು ಬಳಸಲು ನಿರ್ಧರಿಸಿತು! ಅದಕ್ಕೂ ಮಣಿಯದೆ ಹೋದಲ್ಲಿ ಇದ್ದೆ ಇದೆ ದಂಡೋ ಪಾಯ!

ಸ್ನೇಹದ ಕೈ ಚಾಚಿ ಭಾರಿ ಉಡುಗೊರೆಗಳೊಂದಿಗೆ ಆಗಮಿಸಿರುವ ತನ್ನನ್ನು ಎದುರುಗೊಳ್ಳಲು ವಸಂತವಲ್ಲಭ ರಾಯನಿಗೆ ಬದಲಾಗಿ ದಿವಾನರು ಬಂದದ್ದು ಜೇಮ್ಸ್‌ನ ಮನದಲ್ಲಿ ಮತ್ತಷ್ಟು ದ್ವೇಷದ ಹುಳಿಯನ್ನು ಹಿಂಡಿತ್ತು. ತುರ್ತಿನ ಕೆಲಸವಿದ್ದ ಕಾರಣ ರಾಯರು ಊರು ಬಿಟ್ಟು ಹೋಗಬೇಕಿತ್ತೆಂದೂ, ಅವರು ಬರುವವರೆಗೆ ಅತಿಥಿಗಳು ಆರಾಮವಾಗಿ ತಂಗಲು ಎಲ್ಲ ಏರ್ಪಾಡುಗಳನ್ನೂ ಸಾಂಗವಾಗಿ ಮಾಡಿಯೇ ಹೋಗಿರುವರೆಂದೂ ದಿವಾನರು ತಿಳಿಸಿದ್ದರು.

"ಏನು ಯೋಚನೆ ದೊರೆಗಳೇ? ಇನ್ನೇನಾದರೂ ಬೇಕಿತ್ತೆ?"

"ಏನಿಲ್ಲ ಬಿಡು ! ನಾನು ಬರುವ ವಿಷಯ ತಿಳಿಸಿ ಮೊದಲೇ ಪತ್ರ ಕಳುಹಿಸಿಯೂ ನಿಮ್ಮ ರಾಯರು ಹೀಗೆ ಹೊರಟು ಹೋಗಿರುವರಲ್ಲ!"

"ರಾಯರಿಗೆ ಎಷ್ಟೋ ಕಾರುಬಾರುಗಳು! ಅವರಿಲ್ಲದೆ ಇದ್ದರೆ ಏನಂತೆ? ವಸಂತಪುರಿಯ ನಿವಾಸಿಗಳ ಆತಿಥ್ಯದಲ್ಲಿ ನಿಮಗೆ ಯಾವ ಕೊರತೆಯೂ ಇರುವುದಿಲ್ಲ. ಅದೂ ಅಲ್ಲದೆ ದಿವಾನರು ಪ್ರತ್ಯೇಕವಾಗಿ ತಾನೇ ಮುಂದೆ ನಿಂತು ಎಲ್ಲ ಉಸ್ತುವಾರಿ ಮಾಡಿರುವರು. ನನ್ನನ್ನೂ ನಿಮ್ಮ ಸೇವೆಗೆಂದು ನೇಮಿಸಿರುವರು."

"ನನಗೆ ಯಾವ ಕೊರತೆಯೂ ಇಲ್ಲದಂತೆ ನೋಡಿಕೊಂಡಿದ್ದು ಸರಿ. ಆದರೆ ನಾನು ರಾಯರಿಗಾಗಿ ಉಡುಗೊರೆಯಾಗಿ ತಂದಿರುವ ಬೆಲೆ ಬಾಳುವ ವಸ್ತುಗಳನ್ನೆಲ್ಲ ರಾಜ್ಯದೊಳಗೆ ತರಲು ಅನುಮತಿ ನಿರಾಕರಿಸಿ, ಸುಂಕ ಚಾವಡಿ ಹೊರಗಡೆ ತಡೆದು ನಿಲ್ಲಿಸಿಬಿಟ್ಟರಲ್ಲ ನಿಮ್ಮ ದಿವಾನರು !"

"ನಮ್ಮ ರಾಜ್ಯದಲ್ಲಿ ರಾಯರ ದಯೆಯಿಂದ ವಸ್ತ್ರಾಭರಣಗಳಿಗೆ ಭರವಿಲ್ಲ ! ಹಾಗಾಗಿ ನಿಮ್ಮ ವಸ್ತುಗಳು ಎಲ್ಲಿದ್ದರೂ ಬಂದೋ ಬಸ್ತಿನಲ್ಲಿ ಜೋಪಾನವಾಗಿಯೇ ಇರುತ್ತವೆ. ಯೋಚನೆ ಬೇಡಿ ! ರಾಯರ ಆಗಮನದ ನಂತರ, ಅವರ ಅಪ್ಪಣೆ ಪಡೆದು ಎಲ್ಲವನ್ನೂ ಇಲ್ಲಿಗೆ ತರಿಸಿಕೊಳ್ಳಬಹುದು." ಸೇವಕ ಸಮಾಧಾನವಾದ ಮಾತುಗಳನ್ನು ನುಡಿದ. ಅದರಲ್ಲೂ ಒಂದು ಹಿಗ್ಗು, ಒಂದು ಹೆಮ್ಮೆಯ ಛಾಯೆ ಇದ್ದುದ್ದನ್ನು ಜೇಮ್ಸ್ ಗಮನಿಸಿದೇ ಇರಲಿಲ್ಲ. 'ವಸ್ತುಗಳ ಬಗ್ಗೆ ನನಗೂ ಚಿಂತೆ ಇಲ್ಲ! ಆದರೆ ರಾಯರ ಸೇವೆಗಾಗಿ ನಾನು ಕರೆ ತಂದಿರುವ ಸುರ ಸುಂದರಿಯರನ್ನೂ ಕೂಡ ಅಲ್ಲೇ ನಿಲ್ಲಿಸಿಕೊಂಡರಲ್ಲ !"

"ಏನು? ಏನಂದಿರಿ?" ಸೇವಕ ಚೇಳಿನಿಂದ ಕಟುಕಿಸಿಕೊಂದವನಂತೆ ಎಗರಿಬಿಟ್ಟ.

"ಅವರುಗಳನ್ನು ರಾಯರ ಅಂತಪುರದಲ್ಲಿ ಅಲ್ಲದಿದ್ದರೂ, ಗಣಿಕೆಯರ ಬೀದಿಯ ಯಾವುದಾದರೊಂದು ಮನೆಯಲ್ಲಿ ಇರಿಸಬಹುದಿತ್ತು."

"ಅಯ್ಯಾ ಮಹಾರಾಯರೇ ! ಈ ಮಾತನ್ನು ಇನ್ಯಾರ ಮುಂದೆಯಾದರೂ ಆಡಿದ್ದರೆ ನಿಮ್ಮ ನಾಲಿಗೆ ಇಷ್ಟು ಹೊತ್ತಿಗೆ ತುಂಡರಿಸಿ ಬೀಳುತ್ತಿತ್ತು! ಮಹಾರಾಣಿಯವರ ಹೊರತಾಗಿ ನಮ್ಮ ವಸಂತಪುರಿಯ ಹೆಣ್ಣು ಮಕ್ಕಳನ್ನೆಲ್ಲ ನಮ್ಮ ರಾಯರು ತಾಯಂದಿರಾಗಿ, ತಂಗಿಯರಾಗಿ, ತನ್ನ ಸ್ವಂತ ಹೆಣ್ಣು ಮಕ್ಕಳಾಗಿ ಕಾಣುತ್ತಿರುವರು. ತಿಳಿಯಿತೇ? ನೀವು ಹೇಳುವಂತಹ ವೃತ್ತಿಯನ್ನು ರಾಯರು ರಾಜ್ಯದಿಂದ ತೊಡೆದು ಹಾಕಿ ಬಹಳ ಕಾಲವಾಯಿತು. ವಿಷಯ ಹೀಗಿರಲು ಈ ಊರಲ್ಲಿ ಅಂತಹ ಬೀದಿ ಎಲ್ಲಿಂದ ಬರಬೇಕು?" ಚಡಪಡಿಸುತ್ತ ನುಡಿದ ಸೇವಕ.

"ರಾಜನೆಂದ ಮೇಲೆ ಇದೆಲ್ಲ ಸಹಜವಲ್ಲವೇ? ಇಂತಹ ಸಜೀವವಾದ ಸುಂದರವಾದ ನಜರಿನಿಂದ, ಎಲ್ಲ ರಾಜರಂತೆ ನಿಮ್ಮ ರಾಯರೂ ಸಂತೋಷಗೊಳ್ಳುವರು ಎಂದು ಕೊಂಡಿದ್ದೆ! ಸಧ್ಯ ವಿಷಯ ತಿಳಿಸಿ ನನ್ನ ನಾಲಿಗೆ ಉಳಿಸಿದೆ !" ಆಶ್ಚರ್ಯವನ್ನು ನುಂಗಿಕೊಂಡೇ ನುಡಿದ ಜೇಮ್ಸ್.

"ಸರಿ ಬಿಡಿ ದೊರೆ ! ನಮ್ಮ ದೊರೆಗಳ ದೇವರಂತಹ ಗುಣಗಳು ನಿಮ್ಮಂತಹವರಿಗೆ ಹೇಗೆ ತಿಳಿಯಬೇಕು? ಇನ್ನೊಂದು ವಿಷಯವನ್ನೂ ಈಗಲೇ ಹೇಳಿ ಬಿಡುತ್ತೇನೆ ಕೇಳಿ! ನಮ್ಮ ರಾಜ್ಯದಲ್ಲಿ ಮದ್ಯಪಾನ ನಿಷೇದಿಸಲ್ಪಟ್ಟಿದೆ! ನೀವೇನಾದರೂ ಅಂತಹ ಪಾನಗಳನ್ನು ಉಡುಗೊರೆ ಎಂದು ನಿಮ್ಮ ದೇಶದಿಂದ ತಂದಿದ್ದರೆ, ಅದರಿಂದ ರಾಯರನ್ನು ಖುಷಿಪಡಿಸಬಹುದು ಎಂದುಕೊಂಡಿದ್ದರೆ, ಆದನ್ನು ಈಗಲೇ ಮರೆತುಬಿಡಿ! ನಿಮ್ಮ ದೇಶದ ಕಲಾಚಾರ ನಮ್ಮ ರಾಜ್ಯದಲ್ಲಿ ಸಲ್ಲುವುದಿಲ್ಲ."

"ಛಲೇ! ಸುರ ಪಾನವಿಲ್ಲ ! ಸುರ ಸುಂದರಿಯರು ಇಲ್ಲ ! ಮತ್ತೆ ಕಾಲ ಕಳೆಯಲಿ ಏನು ತಾನೆ ಮಾಡುವರು ನಿಮ್ಮ ರಾಯರು?"

"ಸದಾ ರಾಜ್ಯದ ಹಿತದ ಬಗ್ಗೆಯೇ ಚಿಂತಿಸುತ್ತಿರುವ ರಾಯರಿಗೆ ಮಾಡುವುದಕ್ಕೆ ಅದೆಷ್ಟು ಕೆಲಸಗಳು ತಾನೇ ಇಲ್ಲ ! ವ್ಯವಸಾಯ, ಕೈಗಾರಿಕೆ, ಪ್ರಜೆಗಳಿಗೆ ಬೇಕಾದ ವಸ್ತುಗಳನ್ನು ತಯಾರಿ ಮಾಡುವ ಕಾರ್ಖಾನೆಗಳು, ಜಲಾಶಯಗಳ ನಿರ್ಮಾಣ, ನಾಣ್ಯಗಳ ಮುದ್ರಣ, ಕಡಲಾಚೆಯ ಸೀಮೆಗಳೊಂದಿಗೆ ವಾಣಿಜ್ಯ ! ಅದಕ್ಕಾಗಿ ಹಡಗುಗಳ ನಿರ್ಮಾಣ ! ನಮ್ಮ ರಾಜ್ಯದ ಉನ್ನತಿಗೆ ಬೇಕಾದ ಇನ್ನೂ ಎಷ್ಟೋ ಯೋಜನೆಗಳಿಗಾಗಿ ಹಗಲಿರುಳೂ ದುಡಿಯುತ್ತಿರುವರು ನಮ್ಮ ರಾಯರು. ಮುಖ್ಯವಾಗಿ ಸೈನ್ಯವನ್ನು ಬಲಪಡಿಸುವುದರಲ್ಲೂ, ನವೀನವಾದ ಅಸ್ತ್ರಶಸ್ತ್ರಗಳ ಬಳಕೆಯಲ್ಲಿ ಸೈನಿಕರಿಗೆ ತರಬೇತು ನೀಡುವುದರ ಬಗ್ಗೆಯೂ ಬಹಳ ಉತ್ಸುಕರಾಗಿದ್ದಾರೆ. ಅವರು ಮಾಡುತ್ತಿರುವ ಕೆಲಸಗಳಿಗೆ ಒಂದು ದಿವಸದಲ್ಲಿ ಅದೆಷ್ಟು ತಾಸುಗಳು ಇದ್ದರೂ ಸಾಕಾಗುವುದಿಲ್ಲ ದೊರೆ."

ಸೇವಕನ ಹೆಮ್ಮೆಯ ಮಾತುಗಳು ಜೇಮ್ಸ್‌ನ ಮನಸ್ಸಲ್ಲಿ ಕಹಿಯನ್ನು ತುಂಬಿತು.

"ಶಾಂತಿ ಪ್ರಿಯ ಎನಿಸಿಕೊಂಡ ನಿಮ್ಮ ರಾಯರು ಸೈನ್ಯವನ್ನು ಬಲಪಡಿಸಿಕೊಳ್ಳಬೇಕಾದ ಅಗತ್ಯವೇನು?" ಪ್ರಯಾಸೆಯಿಂದ ಅಸೂಯೆಯನ್ನು ನುಂಗಿಕೊಂಡು ಪ್ರಶ್ನಿಸಿದ ಜೇಮ್ಸ್.

"ಸತ್ಯ, ಅಹಿಂಸೆ, ಪ್ರೇಮ, ಧರ್ಮಗಳಿಂದ ಕೂಡಿರುವ ನಮ್ಮ ಈ ಶ್ರೀಮಂತ ನಾಡನ್ನು ವಶಪಡಿಸಿಕೊಳ್ಳಲು ಯಾವ ಯಾವ ಕುತಂತ್ರದ ಹೊಂಚು ಹಾಕುತ್ತಿವೆಯೋ ಏನೋ! ಅಂತಹ ನೀಚ ನರಿಗಳ ಧಾಳಿಯನ್ನು ಎದುರಿಸಲು ನಮ್ಮ ಸೈನ್ಯ ಸದಾ ಸಿದ್ಧವಾಗಿರಬೇಡವೇನು? ನಮ್ಮ ರಕ್ಷಣೆಗಾಗಿ ಸಾಗರ ಸೀಮೆಯಲ್ಲಿ ಸುಸಜ್ಜಿತವಾದ ನೌಕಾ ಪಡೆ ಸಹ ಕಾದಿರಿಸಲಾಗಿದೆ !"

ಜೇಮ್ಸ್ ತನ್ನ ಪೆಚ್ಚು, ಮೊರೆಯನ್ನು ಸೇವಕ ನೋಡದ ಹಾಗೆ ಮರೆ ಮಾಚಿಕೊಳ್ಳಲು ಬಲು ಪ್ರಯಾಸೆಪಟ್ಟನು. ನದಿಯ ಆಚೆಯ ದಡದಲ್ಲಿ ಕಂಗೊಳಿಸುತ್ತಿದ್ದ ವಸಂತವಲ್ಲಭರಾಯನ ಅರಮನೆಯ ಚಿನ್ನದ ಗೋಪುರದ ಮೇಲೆ ಹಾರಾಡುತ್ತಿದ್ದ ವಿಜಯ ಧ್ವಜದಿಂದ ಹೊರಟ ತಂಗಾಳಿಯು ಜೇಮ್ಸ್‌ನ ಮನದಲ್ಲಿ ಪ್ರಜ್ವಲಿಸುತ್ತಿದ್ದ ದ್ವೇಷದ ಕಿಡಿಯನ್ನು ಮತ್ತಷ್ಟು ಕೆರಳಿಸಿತು. 'ಈ ವೈಭವವೆಲ್ಲವೂ ವಶವಾಗಬೇಕು!' ಇಲ್ಲವೇ ನಾಶವಾಗಬೇಕು !' ಎಂಬ ಮಂತ್ರವನ್ನು ಮನಸ್ಸು ಜಪಿಸತೊಡಗಿತು.

ಮನದಲ್ಲಿ ಮನೆ ಮಾಡಿದ್ದ ಕ್ರೋಧ ಮಾತ್ಸರ್ಯಗಳ ಬೇಗೆಯನ್ನು ಸಹಿಸಲಾರದೆ, ವಾಯು ವಿಹಾರ ಮಾಡಿ ಬರುವುದಾಗಿ ಸೇವಕನಿಗೆ ತಿಳಿಸಿ, ನದಿಯ ದಂಡೆಯ ಮೇಲೆ ಬಿರಬಿರನೆ ನಡೆಯತೊಡಗಿದ ಮೇಜರ್ ಜೇಮ್ಸ್.

'ವಶವಾಗಬೇಕು!

ಇಲ್ಲವೇ ನಾಶವಾಗಬೇಕು!

ವಶವಾಗಬೇಕು !

ಇಲ್ಲವೇ ನಾಶವಾಗಬೇಕು!'

***

ನದಿಯ ದಂಡೆಯಲ್ಲಿ ಹೂನ ಒಂದು ಚಲಿಸಿ ಬರುತ್ತಿದ್ದ ಹಾಗೆ ಕಂಡಿತು! ಹರಿವ ನೀರಿನ 'ಕಲಕಲ'ಕ್ಕೆ ಸಾಟಿಯಾಗಿ 'ಕಿಲಕಿಲ' ನಕ್ಕುವು ಬನದ ಬಣ್ಣ ಬಣ್ಣ ಹೂವುಗಳು!

ತೋಪಿನ ಮಾಮರದಲ್ಲಿ ಸಂತಸದಿಂದ ಉಲಿಯುತ್ತಿದ್ದ ಕೋಗಿಲೆಗೆ "ಅಕ್ಕೂ! ಅಕ್ಕೂ!" ಎಂದು ಪ್ರತ್ಯುತ್ತರವ ಕೊಟ್ಟಿತು ಒಂದು ಹೂವು. ಮುಂದುವರಿದ ಕೋಗಿಲೆಯ ಹಾಡಿಗೆ ಮತ್ತೊಂದು ಹೂವು ತನ್ನ ದನಿಗೂಡಿಸಿತು. ಮತ್ತೊಂದು, ಮತ್ತೊಂದು ಎಂದು ಎಲ್ಲ ಹೂವುಗಳೂ ಏಕವಾಗಿ ಉಲಿಯ ತೊಡಗಲು

ಉನ್ಮಾದಗೊಂಡ ಕೋಗಿಲೆಯು ಉಚ್ಚಸ್ಥಾಯಿಯಲ್ಲಿ ಕೂಗುಟ್ಟುತ್ತ ಹಾರಿ ಹೋಯಿತು. ಅದನ್ನು ಕಂಡು ಮತ್ತೆ 'ಕಿಲಕಿಲ' ನಕ್ಕವು ಹೂವುಗಳು.

"'ಸುಮಧುರವಾಗಿ ಹಾಡುತ್ತಿದ್ದ ಕೋಗಿಲೆಯನ್ನು ಓಡಿಸಿಬಿಟ್ಟಿರಲ್ಲೇ?" ಎಂದು ಆತಂಕದಿಂದ ನುಡಿಯಿತು ಸಂಪಿಗೆ ಬಣ್ಣದ ಗುಂಡು ಮಲ್ಲಿಗೆಯೊಂದು.

"ಛೇ ! ಅದರ ಕರ್ಕಶ ದನಿ ನಿನಗೆ ಸುಮಧುರವೇ?" ಎಂದಳು ಸೇವಂತಿಗೆಯಂತಿದ್ದ ಓರ್ವ ಮಾತುಗಾರ್ತಿ.

"ನಿಮ್ಮ ಕೀಟಲೆಯಿಂದಾಗಿ ಅದಕ್ಕೆ ಹುಟ್ಟು ಹಿಡಿಯಿತು! ಅದಕ್ಕೆ ಹಾಗೆ ಅರಚಿತು! ಮೌನವಾಗಿ ಆಲಿಸಿದ್ದರೆ ಒಂದು ಹೊಸ ರಾಗವನ್ನೇ ಅದರಿಂದ ಕಲಿಯಬಹುದಿತ್ತು!" ಅತೃಪ್ತಿಯಿಂದ ಗೊಣಗಿತು ಸಂಪಿಗೆ ಬಣ್ಣದ ಗುಂಡು ಮಲ್ಲಿಗೆ.

"ಏನು? ಕೋಗಿಲೆಯಿಂದ ರಾಗ ಕಲಿಯುವುದೇ? ಎಲ್ಲೋ ಆ ಕೋಗಿಲೆಯ ಉನ್ಮಾನದ ಇವಳಿಗೂ ಸೋಂಕಿರುವ ಹಾಗೆ ಕಾಣುತ್ತಿದೆ. ನೋಡಿರೇ!" ಎಂದು ತುಂಟಿಯೊಬ್ಬಳು ಹಾಸ್ಯದ ಮಾತು ತೆಗೆದಳು.

ಗೆಜ್ಜೆ ಮಣಿಗಳು ಚದುರಿದಂತೆ ಮತ್ತೆ 'ಕಿಲ ಕಿಲ' ನಗು !

'ನಗುವುದೇಕೆ? ಏಳು ಸ್ವರಗಳಲ್ಲಿ ಪಂಚಮವು ಜನಿಸಿದ್ದು ಕೋಗಿಲೆಯಿಂದಲೇ ಅಲ್ಲವೇ?" ಶಾಂತವಾಗಿ ನುಡಿದಳು ಸಂಪಿಗೆ ಬಣ್ಣದ ಗುಂಡುಮಲ್ಲಿಗೆ.

"ಹಾಗಾದರೆ ಇನ್ನೂ ಆರು ಸ್ವರಗಳ ಮೂಲ?" ಕುತೂಹಲದಿಂದ ಎದ್ದಿತು ಗೆಳತಿಯರ ಪ್ರಶ್ನೆ.

"ಕೇಳಿ ಗೆಳತಿಯರೇ ! ನವಿಲಿನಿಂದ ಷಡ್ಜ ಚಾತಕ ಪಕ್ಷಿಯಿಂದ ಋಷಭ, ಆಡಿನಿಂದ ಗಾಂಧಾರ, ಕ್ರೌಂಚ ಪಕ್ಷಿಯಿಂದ ಮಧ್ಯಮ, ಕೋಗಿಲೆಯಿಂದ ಪಂಚಮ, ಕಪ್ಪೆಯಿಂದ ಧೈವತ ಮತ್ತು ಆನೆಯಿಂದ ನಿಷಾದ ಜನಿಸಿದವು ಎಂಬ ಪ್ರತೀತಿ ಇದೆ."

"ಓಹೋಹೋ! ಹಾಗೆಂದರೆ ಸಂಗೀತಗಾರರೆಲ್ಲ ಪಶು ಪಕ್ಷಿಗಳಿಗೆ ಮೊದಲು ಗುರು ವಂದನೆ ಸಲ್ಲಿಸಬೇಕು ಅನ್ನು!" ಮತ್ತೆ ಕಾಲೆಳೆದಳು ಮಾತುಗಾರ್ತಿ.

"ಪ್ರಕೃತಿಯ ಒಂದೊಂದು ಸೃಷ್ಟಿಯಲ್ಲೂ ಸಂಗೀತ ಅಡಗಿರುವುದನ್ನು ನೀವೆಲ್ಲ ಗಮನಿಸಿಲ್ಲವೇನು? ಜುಳು ಜುಳು ಹರಿವ ನದಿ, ಎಲೆಗಳೆಡೆ ತೂರಿಬಂದು ಸುಟಿಗುಟ್ಟುವ ತಂಗಾಳಿ, ಬೋರೆಂದು ಸುರಿವ ಮಳೆ, ಗೋಷ್ಟಿಯಾಗಿ 'ಗುಯ್' ಗುಟ್ಟುವ ಜೀರುಂಡೆಗಳು, ಇವೆಲ್ಲವೂ ಕೂಡ ಸಂಗೀತ ಶಿಕ್ಷಕರೇ ಕಂಡಿರಾ!"

"ಅಮ್ಮಾ ಸಂಗೀತ ಸರಸ್ವತಿ ! ನಿನ್ನ ಸಂಗೀತ ಸಿದ್ಧಾಂತಕ್ಕೆ ಕೋಟಿ ನಮಸ್ಕಾರಗಳು! ಹೊತ್ತು ಮೀರುತ್ತಿದೆ! ಇನ್ನು ಮನೆಗೆ ಮರುಳೋಣವೆ?

"ಇಲ್ಲೇ ಸ್ವಲ್ಪ ಹೊತ್ತು ಕುಳಿತು ಪ್ರಕೃತಿಯೊಂದಿಗೆ ಲಯವಾಗಿ, ರಾಗಾಲಾಪನೆ ಅಭ್ಯಾಸ ಮಾಡಬೇಕೆನ್ನಿಸುತ್ತಿದೆ ನೀಲಾ! ನೀವೆಲ್ಲ ಹೋಗಿ!"

"ಒಂಟಿಯಾಗಿ ಇರುತ್ತೀಯಾ? ಬೇಡವೇ ವಸಂತಸೇನೆ!" ಗಾಬರಿಯಿಂದ ನುಡಿದಳು ಅವರಿಲೆಗೆ ಕೀಟಲೆಯಾಗಿ ಮಾತನಾಡುತ್ತಿದ್ದ ಶಾಂತಾಮಣಿ.

"ರಾಯರ ರಾಜ್ಯದಲ್ಲಿ ಎಲ್ಲಿಯ ಭಯ? ಎಂದು ನಕ್ಕಳು ವಸಂತಸೇನೆ.

"ಅಯ್ಯೋ ! ಹಾಗಲ್ಲವೇ! ಸೂರ್ಯಾಸ್ತಮನದ ಸಮಯದಲ್ಲಿ ಹರೆಯದ ಹೆಣ್ಣು ಮಕ್ಕಳು ಮನೆಯ ಹೊರಗೆ ಓಡಾಡಿದರೆ ಭೂತ ಹಿಡಿಯುತ್ತದಂತೆ ! ರಾಯರು ಭೂತವನ್ನು ಏನು ಮಾಡಬಲ್ಲರು?" ದಿಗಿಲಿನಿಂದ ಪಿಸುಗುಟ್ಟಿದಳು ನೀಲ.

"ಸಂಗೀತಕ್ಕೆ ಒಲಿಯದ ಭೂತವೂ ಉಂಟೇನು?!" ಎಂದು ನಕ್ಕಳು ವಸಂತಸೇನೆ.

"ಭೂತದ ವಿಚಾರದಲ್ಲಿ ತಮಾಷೆ ಬೇಡವೇ!" ಭಯದಿಂದ ಆಕ್ಷೇಪಿಸಿದಳು ಕಾಂತಿ.

"ಹೆದರ ಬೇಡಿರೆ ! ಇನ್ನೂ ಸೂರ್ಯಾಸ್ತಮವಾಗಲು ಒಂದರ್ಧ ತಾಸಿದೆ ! ಅಷ್ಟರಲ್ಲಿ ನಾನು ಅಲ್ಪ ಸಾಧನೆಯನ್ನಾದರೂ ಮಾಡಿ ಬಂದು ಬಿಡುತ್ತೇನೆ."

"ಅಲ್ಲವೇ ! ಪ್ರತಿನಿತ್ಯ ಮುಂಜಾವಿನಿಂದ ಅದೆಷ್ಟೋ ತಾಸುಗಳು ಸಾಧನೆ ಮಾಡುತ್ತೀಯ! ಅದು ಸಾಲದೇ?"

"ಸಾಲದು ನೀಲಾ! ಸಾಲದು! ಈ ವರ್ಷದ ದಸರೆಯ ದರ್ಬಾರಿನಲ್ಲಿ ನಾನು ಮಾಡಲಿರುವ ಸಂಗೀತ ಕಚೇರಿಯು, ವಸಂತಪುರಿಯ ಆಸ್ಥಾನ ಗಾಯಕಿಯಾಗುವ ಯೋಗ್ಯತೆಯನ್ನು ನನಗೆ ಗಳಿಸಿ ಕೊಡುವಂತಿರಬೇಕು! ಅದಕ್ಕಾಗಿ ತೀವ್ರವಾದ ಸಾಧನೆಯನ್ನು ನಾನು ಮಾಡಲೇ ಬೇಕು! ರಾಗ ದೇವತೆಗಳನ್ನೆಲ್ಲ ನಾನು ಹೇಳಿದಂತೆ ಲಾಸ್ಯವಾಡುವಂತೆ ವಶಪಡಿಸಿಕೊಳ್ಳಬೇಕು ! ಅದಕ್ಕೆ ನನ್ನ ಕಂಠವನ್ನು ತಿದ್ದಿ ತೀಡಿ ಪಳಗಿಸಿ ನಿರಾಗಿ ಮಾಡಿಕೊಳ್ಳಬೇಕು!" ಮಾತನಾಡುತ್ತಲೇ ವಸಂತಸೇನೆ ಯಾವುದೋ ಸುಂದರ ಸ್ವಪ್ನದಲ್ಲಿ ತೇಲಿ ಹೋಗತೊಡಗಿದಳು.

ಪೀಡಿಸಿದ ಗೆಳತಿಯರನ್ನೆಲ್ಲ ಸಮಾಧಾನಗೊಳಿಸಿ ಕಳುಹಿಸಿಕೊಟ್ಟ ವಸಂತಸೇನೆ, ನಿಸರ್ಗದ ಸೂಕ್ಷ್ಮವಾದ ಸಂಗೀತವನ್ನು ಗ್ರಹಿಸಿಕೊಳ್ಳುವವಳಂತೆ ಸ್ವಲ್ಪ ಹೊತ್ತು ಮೌನವಾಗಿ ನದಿಗೆ ಮುಖ ಮಾಡಿ ಕುಳಿತಳು. ನಂತರ ತನ್ನ ಮಧುರ ಕಂಠದಿಂದ ಶೃತಿಗೂಡಿಸತೊಡಗಿದಳು.

ಕ್ರಮೇಣ ಬೆಟ್ಟದ ಝರಿಯಂತೆ ಕುಣಿದು ಕುಪ್ಪಳಿಸಿ ಹರಿದ ಜೇನಿನ ಧಾರೆಗೆ ಆ ಇಡೀ ಪ್ರಪಂಚದ ತಟಸ್ಥವಾದಂತೆ ತೋರಿತು. ಆ ರಾಗ ಮಾಧುರ್ಯಕ್ಕೆ ಮಾರುಹೋದ ಸೂರ್ಯದೇವನೂ ಕೂಡ ಮುಳುಗಲೋ ಬೇಡವೋ ಎಂಬಂತೆ ಪಡುವಣದಲ್ಲಿ ಸ್ವಲ್ಪ ತಡವರಿಸುತ್ತಿದ್ದ ಹಾಗೆ ಕಂಡಿತು.

ವಸಂತಸೇನೆ ! ಹೆಸರಿಗೆ ತಕ್ಕ ಸಂಪಿಗೆ ಬಣ್ಣದ ಗುಂಡು ಮಲ್ಲಿಗೆ !

ವಸಂತಪುರಿಯ ಸುಖ, ಶಾಂತಿ, ಸಂತೋಷ, ಸಮೃದ್ಧಿ, ಕೀರ್ತಿ ಮುಂತಾದ ಎಲ್ಲ ಸಿರಿವೈಭವಗಳೂ ಕಲೆತು ಒಂದಾಗಿ ಸಾಕಾರಗೊಂಡಂತೆ ಗಾನ ಸುಧೆಯ ಲಹರಿಯಲ್ಲಿ ತನ್ಮಯಳಾಗಿ ಕುಳಿತ್ತಿದ್ದಳು ವಸಂತಸೇನೆ !

ನಾಭಿಯಲ್ಲಿ ಜನಿಸಿ, ಹೃದಯವನ್ನು ಸೀಳಿಕೊಂಡು ಕಂಠದಿಂದ ಹೊರಹೊಮ್ಮುತ್ತಿದ್ದ ಸಂಗೀತ ಲಹರಿಯು ಇದ್ದಕ್ಕಿದ್ದ ಹಾಗೆಯೇ ಬಲವಂತದಿಂದ ತಡೆಯಲ್ಪಟ್ಟಂತೆ ಭಾಸವಾಯಿತು! ಚಕಿತಗೊಂಡ ವಸಂತಸೇನೆ ಚಕ್ಕೆಂದು ಕಣ್ತೆರೆದಳು. ಆವರಿಸಿದ್ದ ಸಂಜೆಯ ನಸುಗತ್ತಲಲ್ಲಿ ಏನೊಂದೂ ಸ್ಪಷ್ಟವಾಗಿ ಗೋಚರವಾಗುತ್ತಿಲ್ಲ! ಅಯ್ಯೋ ! ಕೂಗಲಾರದೆ ತನ್ನ ಬಾಯನ್ನು ಗಟ್ಟಿಯಾಗಿ ಮುಚ್ಚಿ ಹಿಡಿದಿರುವ ಕೈ ಯಾರದ್ದು? ಒಂದು ವೇಳೆ ಭೂತ ತನ್ನನ್ನು ಹಿಡಿದುಕೊಂಡಿತೆ? ಕೊಸರಿಕೊಳ್ಳಲಾರದೆ ತನ್ನ ರೆಟ್ಟೆಯನ್ನು ಹಿಡಿದು ಹಿಂಡುತ್ತಿದ್ದ ಕ್ರೂರವಾದ ಪಂಜುಗಳು ಭೂತದ್ದೇ ಆಗಿರಬೇಕು !

'ವಶವಾಗಬೇಕು!

ಇಲ್ಲವೇ ನಾಶವಾಗಬೇಕು!'

ಭೂತ ಅದೇನೋ ಗೊಣಗುತ್ತಿದೆ! ಅಯ್ಯೋ! ಅದು ತನ್ನನ್ನು ಎಲ್ಲಿಗೆ ಎಳೆದು ಒಯ್ಯುತ್ತಿದೆ? ಅಘಾತಕ್ಕೊಳಗಾದ ವಸಂತಸೇನೆ ದಿಗ್ಭ್ರಾಂತಳಾದಳು ! ಮಾಡುವುದರಿಯದೆ ಸುಂಟರಗಾಳಿಗೆ ಸಿಕ್ಕ ತರಗೆಲೆಯಂತೆ ತತ್ತರಿಸಿದಳು. ಮರುಕ್ಷಣವೇ ಯಾರೋ ಆ ಭೂತವನ್ನು ಕಿತ್ತು ದೂರ ಬಗೆದಂತಿತ್ತು!

"ಎಲವೋ ಧೂರ್ತನೇ! ನಮ್ಮ ನಾಡು ಕಾಡು ಎಲ್ಲವನ್ನೂ ವಶಪಡಿಸಿಕೊಳ್ಳಲು ಸಂಚು ಹೂಡುತ್ತಿರುವುದು ಸಾಲದೆ? ಇಂದು ಇಂತಹ ನೀತಿಗೆಟ್ಟ ಕೆಲಸಕ್ಕೂ ದುಡುಕಿಯೆಲ್ಲೋ ನೀಚಾ!"

ಕೆಂಡ ಕಾರಿದ ಅನಿರುದ್ಧನ ಗರ್ಜನೆಯಿಂದ ಆ ಪ್ರಾಂತ್ಯವೇ ನಡುನಡುಗಿತು. ಕುದುರೆಯ ಮೇಲೆ ಆಸೀನನಾಗಿದ್ದವನ ಕೈಯಲ್ಲಿ ನಾಗ ಪಾಶದಂತೆ ಜೋಲಾಯುತ್ತಿದ್ದ ಚಾವಟಿಯ ತುದಿ 'ಇನ್ನು ಯಾರನ್ನು ಕಿತ್ತೊಗೆಯಬೇಕು' ಎಂದು ಪ್ರಶ್ನಿಸುವಂತೆ ನೆಲದ ಮೇಲೆ ಹೊರಳಿ ತಡಕಾಡಿತು.

"ಇಂಪಾದ ಗಾನವನ್ನು ಆಲಿಸಿ ನಾವು ಲಗಾಮು ಎಳೆದು ಪಯಣ ನಿಲ್ಲಿಸಿದ್ದು ಎಷ್ಟು ಒಳಿತಾಯಿತು ! ಈ ದುಷ್ಟನನ್ನು ಈಗಲೇ ಒಗೆದು ಹಿಂಡಿ ಹಿಪ್ಪೆ ಮಾಡದೇ ಬಿಡುವುದಿಲ್ಲ!" ಮಿತಿಮೀರಿದ ಕೋಪದಲ್ಲಿ ಹಲ್ಲು ಮಸೆದ ವಿಜಯ ವಿಕ್ರಮ ತನ್ನ ಕುದುರೆಯಿಂದ ಮೊದಲು ಚಂಗೆಂದು ಕೆಳಕ್ಕೆ ಹಾರಿದನು.

ಅಂಜಿ ಓಡಲು ಎತ್ನಿಸಿದ ಭೂತ, ಜೋಡಿ ಸಿಂಹಗಳ ಆಕ್ರಮಣವನ್ನು ಎದುರಿಸಲಾರದೆ ತತ್ತರಿಸಿತು! ಒದ್ದಾಡಿತು! ನಾಲ್ಕು ಬಲಿಷ್ಠ ಕೈಗಳ ನಡುವೆ ಚೆಂಡಾಡಲ್ಪಟ್ಟು ಗಾಯಗಳ ಮುದ್ದೆಯಾಗಿ ನೆಲಕಚ್ಚಿ ಬಿದ್ದುಕೊಂಡಿತು. ಪರಿಸ್ಥಿತಿಯ ಗಾಂಭೀರ್ಯತೆಯನ್ನು ಇದೀಗ ಗ್ರಹಿಸಿಕೊಳ್ಳಲು ಎತ್ನಿಸುತ್ತಿದ್ದ ವಸಂತಸೇನೆ ದಿಗಿಲಿನಿಂದಲೂ ಜಿಗುಪ್ಸೆಯಿಂದಲೂ ಒಂದು ವಿಧವಾದ ಕೀಳರಿಮೆಯಿಂದಲೂ ಬಹುವಾಗಿ ಕಳಮಳಗೊಂಡಳು. ಉಮ್ಮಳಿಸಿ ಬಂದ ದುಃಖದಿಂದ ಕಂಗಳು ತುಂಬಿ ತುಳುಕಿ ತುಟಿಗಳು ಅದುರಿದವು. ತಕ್ಕ ಸಮಯಕ್ಕೆ ಎಲ್ಲಿಂದಲೋ ಬಂದು ತನ್ನನ್ನು

ರಕ್ಷಿಸಿದವರನ್ನು ಕುರಿತು ಕೈಮುಗಿದು ಪಾದಾತಿಕೇಶ ಕಂಪಿಸುತ್ತ ಅಭಲೆಯಾಗಿ ನಿಂದಳು.

ಅಯ್ಯೋ! ಹೆಣ್ಣನ್ನು ಅಭಲೆಯೆಂದು ಗಿಳಿಯಂತೆ ರಕ್ಷಿಸುವ ನಮ್ಮ ಸಂಸ್ಕೃತಿ ಇಂದಿನ ವಾತಾವರಣಕ್ಕೆ ಯುಕ್ತವಲ್ಲವೋ? ಇಂದಿನ ಘಟನೆಯು ಬರಲಿರುವ ಕೆಟ್ಟಕಾಲದ ವೈಪರೀತ್ಯವನ್ನು ಮುಂಸೂಚಿಸುತ್ತಿದೆಯೋ? ಏನಾದರಾಗಲಿ ಇನ್ನು ಮುಂದೆ ವಸಂತಪುರಿಯ ಹೆಣ್ಣು ಮಕ್ಕಳು ಅಭಲೆಯರಾಗಿರಕೂಡದು! ಕೂಡಲೇ ಕೂಡದು!

“ವಲ್ಲಭರಾಯನ ರಾಜ್ಯದಲ್ಲಿ ಹೆಣ್ಣು ಮಕ್ಕಳು ನಿರ್ಭಯರಾಗಿರಬಹುದು ಎಂಬ ಭರವಸೆಗೆ ಇಂದು ಧಕ್ಕೆಯುಂಟಾಯಿತು. ಇನ್ನು ಮುಂದೆ ಹೆಣ್ಣು ಮಕ್ಕಳೆಲ್ಲ ತಮ್ಮನ್ನು ಸ್ವತಹ ತಾವೇ ಕಾಯ್ದುಕೊಳ್ಳುವ ಯೋಗ್ಯತೆಯನ್ನು ಹೊಂದಬೇಕು. ಚಿತ್ತಾವಧಾನವನ್ನೂ ಏಕಾಗ್ರತೆಯನ್ನೂ ಅಭಿವೃದ್ಧಿಗೊಳಿಸುವಂತಹ ವ್ಯಾಯಾಮಗಳನ್ನೂ ಸಮರ ಕಲೆಗಳನ್ನೂ ಧ್ಯಾನ ಯೋಗ ಮಾರ್ಗಗಳನ್ನೂ ಅವರಿಗೆ ಕಲಿಸಿ ಅವರ ಮೈಮನಗಳನ್ನು ದೃಢಗೊಳಿಸಬೇಕು. ವಸಂತಪುರಿಯಲ್ಲಿ ಹೆಣ್ಣು ಮಕ್ಕಳಿಗಾಗಿ ಈಗಲೇ ಒಂದು ವ್ಯಾಯಾಮ ಕೇಂದ್ರ ಸ್ಥಾಪನೆಯಾಗಲಿ. ಅವರ ದೇಹ ಶಕ್ತಿಯನ್ನು ವೃದ್ಧಿಗೊಳಿಸಲು ಬೇಕಾದ ಪೌಷ್ಠಿಕ ಆಹಾರಗಳು ಅರಮನೆಯ ಪಾಕಶಾಲೆಯಿಂದಲೇ ಸರಬರಾಜಾಗಲಿ. ರಾಜ್ಯದ ಎಲ್ಲ ನಗರಗಳಲ್ಲೂ ಚಿಕ್ಕ ಪುಟ್ಟ ಹಳ್ಳಿಗಳಲ್ಲೂ ಸಹ ಇಂತದ್ದೇ ಕೇಂದ್ರಗಳ ಸ್ಥಾಪನೆಯಾಗಲಿ. ನಮ್ಮ ರಾಜ್ಯದ ಹೆಣ್ಣು ಮಕ್ಕಳೆಲ್ಲ ಕೋಮಲೆಯರೇ ! ಅದರೂ ತಾವು ರುದ್ರು ಕೋಮಲೆಯರು ಎಂದು ಅವರು ಸಾಬೀತು ಪಡಿಸಲಿ ! ವಸಂತಪುರಿಯ ಕೋಮಲ ಪುಷ್ಪಗಳೆಲ್ಲ ಕೃಷ್ಣಪುಷ್ಪಗಳಾಗಲಿ! ಇನ್ನೂ ಒಂದೇ ವರುಷದಲ್ಲಿ ಎಂತಹ ದುಷ್ಟ ಶಕ್ತಿಯನ್ನೂ ಸದೆ ಬಡಿಯಬಲ್ಲ ಕೃಷ್ಣ ಪುಷ್ಪಗಳ ಒಂದು ದಂಡೇ ತಯಾರಾಗಲಿ!”

ನಡೆದು ಹೋದ, ನಡೆಯುತ್ತಿರುವ ಘಟನೆಗಳ ಭಾರವನ್ನು ಹೊರಲಾರದೆ ವಸಂತಸೇನೆ ಭ್ರಮಿಸಿ ನಿಂತಿರಲು - ಅಯ್ಯೋ ! ಸ್ನೇಹದ ಕೈ ಚಾಚಿ ಬಂದವನು ಅಸೂಯೆಯಿಂದ ಮೈಮರೆತು ವರ್ತಿಸಿ ಎಂತಹ ವೈರತ್ವವನ್ನು ಸಂಪಾದಿಸಿಕೊಂಡೆ ಎಂದು ಗಾಯದ ಮುದ್ದೆಯಾಗಿ ಬಿದ್ದುಕೊಂಡಿದ್ದ ಮೇಜರ್ ಜೇಮ್ಸ್ ನರಳುತ್ತಿರಲು - ತನ್ನ ಮನಸ್ಸಲ್ಲಿದ್ದ ಇಷ್ಟು ಅಷ್ಟು ಅನುಮಾನಗಳನ್ನೂ ನುಚ್ಚು ನೂರು ಮಾಡುವಂತೆ ತನ್ನ ಕಣ್ಣೆದುರು ಅನಾವರಣಗೊಳ್ಳುತ್ತಿದ್ದ ವಿಸ್ಮಯವನ್ನು ವಿಜಯವಿಕ್ರಮ ಆಶ್ಚರ್ಯದಿಂದ ವೀಕ್ಷಿಸುತ್ತಿರಲು - ಸಿಂಹ ನಾದವಾಗಿ ಅಬ್ಬರಿಸಿ ಸಾಲಾಗಿ ಕಟ್ಟಪ್ಪಣೆಗಳನ್ನು ಘೋಷಿಸುತ್ತ ವಿಶ್ವರೂ ತಾಳಿ ನಿಂದ ಅನಿರುದ್ಧನ ವೇಷದಿಂದ ಹೊರಬಂದ ವಸಂಪುರಿಯ ಒಡೆಯ ವಸಂತವಲ್ಲಭರಾಯ !

●

**ಹ್ಯಾಂಗ ಬೆಳೆಸಲಿ?!**

ಹ್ಯಾಂಗ ಬೆಳೆಸಲಿ ಮಗಳೇ ನಿನ್ನ?
ಕುರಿ ಕೋಳಿಯಂತಾದರೆ,
ಬಲಿಕೊಡುವರು ನಿನ್ನ!
ಹುಲಿ-ಚಿರತೆಯಂತಾದರೆ,
ಬಲೆಯಲಿಡುವರು ನಿನ್ನ!

***

**ಅಭ್ಯಾಸ ಬಲ**

ಜೋಯಿಸನ ಹೆಂಡತಿಗೆ ಶುರುವಾಯ್ತು
ಹೆರಿಗೆ ನೋವಿನ ಕಾಟ.
ಜೋಯಿಸಗೆ ಶುರುವಾಯ್ತು
ಶುಭ ಮುಹೂರ್ತದ ಹುಡುಕಾಟ.
ಅಭ್ಯಾಸ ಬಲ, 'ಇಂದು ಅಶುಭವಿದೆ,
ನಾಳೆ ಹಡೆ' ಅಂದ!.

*- ಕೆ.ಜಿ. ಭದ್ರಣ್ಣವರ*

**ಜೀವಿ ವಚನ**

# ಸತ್ಯಕ್ಕೆ ಹಲವು ಮುಖ

1

ಜನನ–ಮರಣ ಒಂದು ಚಕ್ರ, ಬಿಡಿಸಿಕೊಂಡವನೆ ಮುಕ್ತ.
ಮತ್ತೆ ಮತ್ತೆ ಹುಟ್ಟು ಇದೆ; ನಂಬಿದರೆ ನಂಬಿ, ನಂಬದಿದ್ದರೆ ಬಿಡಿ.
ಪುನರ್ಜನ್ಮ ಇದು ಜೀವಗಳ ಹಣೆಬರಹ, ಅಳಿಸಲಾಗದ ಸತ್ಯ.
ಅದನ್ನು ನೀವು ಸತ್ಯವೆಂದರೂ ಸತ್ಯ, ಮಿಥ್ಯೆ ಎಂದರೂ ಸತ್ಯ.
ಬುದ್ಧನಿಗಿತ್ತು ನೂರು ಜನ್ಮಗಳ ಸ್ಮರಣೆ, ನಮಗೆ ಇಲ್ಲ, ಇದೂ ಸತ್ಯ.

2

‘ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವಚಾರ್ಜುನ’ ಎಂದ ಕೃಷ್ಣ.
ನರನದು ಮರುಹುಟ್ಟು, ಆದರೆ ನಾರಾಯಣನದು ಪುನರಾವತಾರ.
ಜನುಮಮರಣದ ಲೀಲೆ, ಎಲ್ಲದಕ್ಕೂ ಅವನೇ ಸೂತ್ರಧಾರ.
ಮತ್ತೆಮತ್ತೆ ಸಾಯುವ ಶರೀರ, ಬದಲುಮಾಡುವ ಹಳೆಯ ಬಟ್ಟೆ.
ಉಟ್ಟು ಹರಿಯುವ ದೇಹಕಾಗಿ ಯಾಕೆ ಶೋಕ, ಯಾಕೆ ಮೋಹ?

3

ಆದಿ ಗೊತ್ತಿಲ್ಲ, ಅಂತ ಗೊತ್ತಿಲ್ಲ; ಮಧ್ಯದಲ್ಲಿ ಇರುವದೇ ಜೀವನ.
‘ನಾ ತೊಟ್ಟ ದೇಹಗಳ ಲೆಕ್ಕ/ ಇಡುವವರ ಸೊಕ್ಕ/ಯಮs ನೋಡಿ ನಕ್ಕ’
ಎಂದು ಹಾಡಿದರು ಬೇಂದ್ರೆ: ‘ಮುಗಿಯದ ಕಾಳಕ್ಕ/ ಜನುಮಗಳ ಮ್ಯಾಳಕ್ಕ/
ಕುಣಿಯೋಣು ಬಾ’ ಎಂದು ಸಖಿಗೆ ಕರೆದ ವರಕವಿ ದತ್ತ. ನಿನ್ನೆಗಳ ಮರೆತು,
ನಾಳೆಗಳ ತೊರೆದು, ಇಂದು ಇರುವುದೇ ನಿಜ ಬಾಳುವೆಯ ಗುಟ್ಟು.

4

‘ಹುಟ್ಟದೇ ಇರುವವರು ಸಾಯುವುದೆ ಇಲ್ಲ, ಬರೆಯದ ಪುಸ್ತಕವ ಓದಿದವರಿಲ್ಲ.’
‘ಜಾತಸ್ಯ ಮರಣಂ ಧ್ರುವಂ’; ಹುಟ್ಟು ಎಷ್ಟು ಸತ್ಯವೋ ಸಾವೂ ಅಷ್ಟೇ ಸತ್ಯ.
ಮಧ್ಯದಲ್ಲಿರುವ ಬಾಳು ಕೂಡ ಸತ್ಯ, ಮಿಥ್ಯೆ ಎಲ್ಲಿದೆ ಹುಡುಕಲು?
‘ಸೋಹಂ’ ಎಂದರೆ ಅಹಂಕಾರ, ‘ಕೋಹಂ’ ಎಂದರೆ ಸಂಶಯ, ‘ದಾಸೋಹಂ’,
‘ಶಿಷ್ಯಸ್ತೇಹಂ’ ಅನ್ನುವುದೇ ಕ್ಷೇಮ; ಮಾತುಕೊಡು, ‘ಕರಿಷ್ಯೇ
ವಚನಂ ತವ’ ಎಂದು.

**– ಡಾ। ‘ಜೀವಿ’ ಕುಲಕರ್ಣಿ**

(ಸ್ವಾಮಿ ಜಗದಾತ್ಮಾನಂದರ ‘ಬದುಕಲು ಕಲಿಯಿರಿ’
ಅಧ್ಯಾ೦ಯ ಐದರಿಂದ ಸ್ಫುರಿಸಿದ್ದು)

# ನೇಸರು ಜಾಗತಿಕ ಏಕಾಂಕ ನಾಟಕ ಸ್ಪರ್ಧೆ– 2017

ಮೈಸೂರು ಅಸೋಸಿಯೇಷನ್‌ಗೆ 90 ವರ್ಷ ತುಂಬಿರುವುದರಿಂದ, ಈ ಸಂಭ್ರಮದ ಪ್ರಯುಕ್ತವಾಗಿ ಮೈಸೂರು ಅಸೋಸಿಯೇಷನ್ ಏಕಾಂಕ ನಾಟಕ ರಚನಾ ಸ್ಪರ್ಧೆಯನ್ನು ಆಯೋಜಿಸಿದೆ. ಈ ಸ್ಪರ್ಧೆಯಲ್ಲಿ ಇಡೀ ಭಾರತದಾದ್ಯಂತ ಇರುವ ಎಲ್ಲ ಸಾಹಿತ್ಯಾಸಕ್ತರು ಇದರಲ್ಲಿ ಭಾಗವಹಿಸಬಹುದಾಗಿದೆ. ಆಸಕ್ತ ನಾಟಕಕಾರರು ಯಾವುದೇ ವಿಷಯದ ಕುರಿತಂತೆ ನಾಟಕಗಳನ್ನು ರಚಿಸಬಹುದಾಗಿದೆ. ಇಲ್ಲಿಯಾವುದೇ ಪ್ರವೇಶ ಶುಲ್ಕವಿರುವುದಿಲ್ಲ.

| | |
|---|---|
| **ಪ್ರಥಮ ಬಹುಮಾನ** | **10000/–** |
| **ದ್ವಿತೀಯ ಬಹುಮಾನ** | **5000/–** |
| **ತೃತೀಯ ಬಹುಮಾನ** | **3000/–** |
| **ಪ್ರೋತ್ಸಾಹಕ :** | **1000/– (ತಲಾಇಬ್ಬರಿಗೆ)** |

## ಸ್ಪರ್ಧೆಯ ನಿಯಮಾವಳಿಗಳು:

1) ನಾಟಕಗಳು ಸ್ವರಚಿತವಾಗಿರಬೇಕು. ಅನುವಾದ, ಅನುಕರಣೆ ಆಗಿರಕೂಡದು.
2) ನಾಟಕಗಳು ಸುಮಾರು 30 ಪುಟಗಳ ಮಿತಿಯಲ್ಲಿರಲಿ. ಒಂದು ವೇಳೆ ಈ ನಾಟಕವನ್ನು ಪ್ರದರ್ಶನ ಮಾಡಿದರೆ45 ನಿಮಿಷಗಳ ಒಳಗೆ ಮುಗಿಯುವಂತಿರಬೇಕು.ಕಾಗದದಒಂದೇ ಮಗ್ಗುಲಲ್ಲಿ ಚಿತ್ತಿಲ್ಲದಂತೆ ಬರೆದು ಕಳುಹಿಸಿ. (ಹಸ್ತ ಯಾ ಕಂಪ್ಯೂಟರ್ ಮುದ್ರಿತ). ಇಮೈಲ್ ಮೂಲಕವೂ ಕಳುಹಿಸಬಹುದು.
3) ನಾಟಕಕಾರರ ಹೆಸರು, ವಿಳಾಸ, ಮೊಬೈಲ್ ಸಂಖ್ಯೆ ಹಾಗೂ ಇಮೈಲ್‌ಇದ್ದಲ್ಲಿ ಪ್ರತ್ಯೇಕಕಾಗದದಲ್ಲಿ ಬರೆದು ಕಳುಹಿಸಿ.
4) ಒಬ್ಬರು ಒಂದೇ ನಾಟಕವನ್ನು ಬರೆದು ಕಳುಹಿಸಬೇಕು.
5) ಸ್ಪರ್ಧೆಗೆ ಬಂದ ನಾಟಕಗಳನ್ನು ಮರಳಿಸಲಾಗುವುದಿಲ್ಲ.
6) ತೀರ್ಪುಗಾರರ ತೀರ್ಮಾನವೇ ಅಂತಿಮ.
7) ನಾಟಕಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ 10.09.2017
8) ತೀರ್ಪುಗಾರರ ತೀರ್ಮಾನವನ್ನು ನವೆಂಬರ್ ತಿಂಗಳಿನಲ್ಲಿ ಜಾಹೀರು ಗೊಳಿಸಲಾಗುವುದು.

ಆಯ್ಕೆಯಾದ ಏಕಾಂಕ ನಾಟಕಗಳನ್ನು ಮೈಸೂರು ಅಸೋಸಿಯೇಷನ್‌ನ ಮುಖವಾಣಿ ನೇಸರು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

**Postal Address:**

**The Mysore Association, Mumbai**

393, Bhaudaji Road, Matunga, Mumbai – 400019

Tel: 022- 24024647, 24037065 Fax: 24010574

email:nataka.nesaru@gmail.com / mysoreassociation.mumbai@gmail.com

**ಪ್ರಿಯ ಸದಸ್ಯರೇ,**

ತಮಗೆಲ್ಲಾ ತಿಳಿದಿರುವಂತೆ, ನಮ್ಮ ಅಸೋಸಿಯೇಷನ್ನಿನ ಶ್ರೀ ಸಿದ್ಧಿ ವಿನಾಯಕನಿಗೆ ನಿತ್ಯ ಪೂಜೆಯು ಅನೇಕ ವರ್ಷಗಳಿಂದ ತಪ್ಪದೇ ನಡೆದುಕೊಂಡು ಬರುತ್ತಿದೆ. ಇದಲ್ಲದೇ, ಆಗಾಗ ಮಾಘ, ಅಕ್ಷಯ ತದಿಗೆ ಹಾಗೂ ಗಣೇಶೋತ್ಸವದಂತಹ ವಿಶೇಷ ಪೂಜೆಗಳೂ ನಡೆಯುತ್ತದೆ.

ಈ ಪೂಜೆಗಳನ್ನು ನಿರ್ವಹಿಸುದಕ್ಕಾಗಿ, ನಮ್ಮ ಅಸೋಸಿಯೇಷನ್‌ನ ಸದಸ್ಯರು ಹಾಗೂ ಇತರ ಅಭಿಮಾನಿಗಳು ಉದಾರವಾಗಿ ನೀಡಿದ ದೇಣಿಗೆಯಿಂದ ಪ್ರತ್ಯೇಕ ನಿಧಿಯ ಏರ್ಪಾಟು ಮಾಡಿರುತ್ತದೆ. ಆದರೆ ಈಗ, ಹೆಚ್ಚುತ್ತಿರುವ ಖರ್ಚುವೆಚ್ಚಗಳಿಂದ, ಈ ನಿಧಿಯಿಂದ ಈ ನಮ್ಮ ಪೂಜೆಯನ್ನು ನಿರ್ವಹಿಸುವುದು ಕಷ್ಟವಾಗಿದೆ. ಆದ್ದರಿಂದ, ಈ ನಿಧಿಯನ್ನು ಬಲಪಡಿಸುವುದು ಅನಿವಾರ್ಯವಾಗಿದೆ.

ಈ ಉದ್ದೇಶದಿಂದ, ನಮ್ಮ ಸದಸ್ಯರುಗಳಿಗೆ ಉದಾರ ದೇಣಿಗೆಗಾಗಿ ಮನವಿ ಮಾಡುತ್ತಿದ್ದೇವೆ. ಪೂಜೆಯ ಅಂದಾಜು ಖರ್ಚುವೆಚ್ಚ ಕೆಳಗೆ ಕೊಟ್ಟಿದೆ. ತಮಗೆ ಇಷ್ಟವಿದ್ದ ದಿವಸ/ ದಿವಸಗಳು, ಪೂಜೆಗೋಸ್ಕರ ದೇಣಿಗೆ ನೀಡಬಹುದು. ಆ ದಿನದ ಪೂಜೆಗೆ ತಮಗೆ ಆಹ್ವಾನ ನೀಡಲಾಗುವುದು ಹಾಗೂ ಪ್ರಸಾದವನ್ನೂ ತಮಗೆ ಕಳುಹಿಸಲಾಗುವುದು.

ದಯವಿಟ್ಟು ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಈ ಮನವಿಗೆ ಸ್ಪಂದಿಸಬೇಕು ಎಂದು ಮತ್ತೊಮ್ಮೆ ಕೋರುತ್ತೇವೆ.

ದಯವಿಟ್ಟು ಈ ಕೆಳಕಂಡ ವಿವರಗಳೊಂದಿಗೆ ನಮ್ಮ ಅಸೋಸಿಯೇಷನ್ನಿನ ಕಛೇರಿಯನ್ನು ಸಂಪರ್ಕಿಸಿ.

ಹೆಸರು :

ತಾರೀಖು:

ನಕ್ಷತ್ರ :

ಗೋತ್ರ :

ವೊತ್ತ :

ನಿತ್ಯ ಪೂಜೆ/ಅಕ್ಷಯ ತೃತೀಯ/ ಗೌರಿ ಗಣಪತಿ ಪೂಜೆ/ ಮಾಘ ಗಣಪತಿ ಪೂಜೆ :

ಇತರ ವಿವರಗಳು :

ಪೂಜೆಯ ವಿವರಗಳು:

ವಿ.ಸೂಚನೆ: ಈಗಾಗಲೇ ನಮ್ಮ ಈ ನಿಧಿಗೆ ಕಾಣಿಕೆ ಕೊಟ್ಟಿರುವರು ಕೂಡ ಹೆಚ್ಚಿನ ಕಾಣಿಕೆ ನೀಡುವುದನ್ನು ಸ್ವಾಗತಿಸುತ್ತೇವೆ.

| | ಪ್ರತಿ ಪೂಜೆ (Per Pooja) | ಠೇವಣಿ (Fixed deposit Amount -Life time) |
|---|---|---|
| ಮಾಘ ಗಣಪತಿ ಪೂಜೆ | 251.00 | 3500.00 |
| ಅಕ್ಷಯ ತೃತೀಯ ಪೂಜೆ | 251.00 | 3500.00 |
| ಗೌರಿ ಗಣಪತಿ ಪೂಜೆ (ಗಣೇಶ ಚತುರ್ಥಿ) | 251.00 | 3500.00 |
| ನಿತ್ಯ ಪೂಜೆ | 251.00 | 3500.00 |

Date of Publication : 10th of every month RNI No. 040015 / 83
Regd. No. MNE / 93 / 2015-17 Date of Posting:10/11th of every month
at Mumbai Patrika Channel Sorting Office G.P.O.

# ಮೈಸೂರು ಅಸೋಸಿಯೇಷನ್, ಮುಂಬೈ
# THE MYSORE ASSOCIATION, MUMBAI

ಪ್ರಸ್ತುತ ಪಡಿಸುವ

ದಿನಾಂಕ 24.06.2017 ರ ಶನಿವಾರ ಸಂಜೆ 6.30ಕ್ಕೆ

ಮೈಸೂರು ಅಸೋಸಿಯೇಷನ್ ಏರ್ಪಡಿಸಿದ

## ಎರಡನೆ "ಜಾಗತಿಕ ಕನ್ನಡ ಕವನ ಸ್ಪರ್ಧೆ" – 2017ರ
## ಬಹುಮಾನ ವಿತರಣಾ ಸಮಾರಂಭ

ಹಾಗೂ ಮೈಸೂರು ಅಸೋಸಿಯೇಷನ್‌ನ ಮುಖವಾಣಿ

## 'ನೇಸರು' ವಿಶೇಷ ಸಂಚಿಕೆ ಬಿಡುಗಡೆ ಕಾರ್ಯಕ್ರಮ

ಮುಖ್ಯ ಅತಿಥಿ : ಶ್ರೀ. ಮನು ಬಳಿಗಾರ್
(ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು)

ವಿಶೇಷ ಅತಿಥಿ : ಡಾ. ಜಯಂತ್ ಕಾಯ್ಕಿಣಿ
(ಖ್ಯಾತ ಲೇಖಕರು, ಬೆಂಗಳೂರು)

ಡಾ. ಸುನೀತಾ ಶೆಟ್ಟಿ
(ಖ್ಯಾತ ಲೇಖಕರು, ಮುಂಬಯಿ)

ಅಧ್ಯಕ್ಷತೆ : ಶ್ರೀಮತಿ. ಕಮಲ ಕೆ.
(ಅಧ್ಯಕ್ಷರು, ಮೈಸೂರು ಅಸೋಸಿಯೇಷನ್, ಮುಂಬೈ)

'ರಸಮಂಜರಿ' : ವಿದುಷಿ ಶ್ಯಾಮಲಾ ಪ್ರಕಾಶ್ ಅವರಿಂದ
ಬಹುಮಾನಿತ ಕವಿತೆಗಳ ಗಾಯನ.

ವಿ.ಸೂ. : ಕಾರ್ಯಕ್ರಮದ ನಂತರ ಪ್ರೀತಿ ಭೋಜನವಿದೆ.

ಸ್ಥಳ : ಮೈಸೂರು ಅಸೋಸಿಯೇಷನ್ ಸಭಾಗೃಹ, ನಂ. 393, ಭಾವು ದಾಜಿ ರಸ್ತೆ,
ಮಾತುಂಗಾ (ಪೂರ್ವ), ಮುಂಬೈ – 400 019.
ದೂರವಾಣಿ : 022 2402 4647 / 2403 7065.

ತಮಗೆಲ್ಲರಿಗೂ ಆತ್ಮೀಯ ಸ್ವಾಗತ.

Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 • Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361